ಬೆಲೆ ರೂ.2.50
D.O.P - 15th of every month at Udupi Head Office

# ಶ್ರೀ ಶಾರದಾ


ಮಾಸಪತ್ರಿಕೆ – 15 ಆಗಸ್ಟ್ 2023

॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

RNI No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102. ☎ 0820-2958444, 8971185844
ಸಂಪುಟ-24 ಸಂಚಿಕೆ-8 ಪುಟಗಳು-8 Registered Under No.UDP/1260/2021-2023 Licenced to Post without Prepayment Licence No. SK/WPP/UDP/81/2021-23

## ಚಾತುರ್ಮಾಸ್ಯದಲ್ಲಿ ಶೃಂಗೇರಿ ಜಗದ್ಗುರುಗಳ ಭೇಟಿ



ಶೃಂಗೇರಿ ಮಠದ ದ.ಕ.ಪ್ರಾಂತ್ಯದ ಧರ್ಮಾಧಿಕಾರಿಗಳಾದ ಶ್ರೀ ಸತ್ಯಶಂಕರ ಬೊಳ್ಳಾವ ಮತ್ತು ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ಶೃಂಗೇರಿ ಗುರುದ್ವಯರ ಚಾತುರ್ಮಾಸ್ಯದ ಸಂದರ್ಭದಲ್ಲಿ ಅವರಿಬ್ಬರ ದರ್ಶನಕ್ಕಾಗಿ ಶೃಂಗೇರಿಗೆ ತೆರಳುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅದರಂತೆ ದಿನಾಂಕ 13.08.2023ರಂದು ಗುರುದ್ವಯರ ದರ್ಶನಕ್ಕಾಗಿ ತೆರಳಲು ಉಡುಪಿಯಿಂದ ಈ ಬಾರಿ ಸುಮಾರು 3 ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ.

### ಉಡುಪಿ ಶ್ರೀ ಶಾರದಾ ಮಂಟಪದ ಹವಾನಿಯಂತ್ರಿತ ಸಭಾಂಗಣಕ್ಕೆ ದೇಣಿಗೆ ನೀಡಿದವರು

| | | |
|---|---|---|
| 01. | ಶ್ರೀ ಲಕ್ಷ್ಮೀನಾರಾಯಣ ಶ್ಯಾನಭೋಗ್ ಮತ್ತು ಮನೆಯವರು, ಪೆರಂಪಳ್ಳಿ | 50,001 |
| 02. | ಶ್ರೀಮತಿ ಚಂದ್ರಕಲಾ ಎಸ್. ರಾವ್, ಚಿಟ್ಪಾಡಿ | 30,000 |
| 03. | ಶ್ರೀಮತಿ ಗೀತಾ ಸುಬ್ಬ ರಾವ್, ಉಡುಪಿ | 10,000 |
| 04. | ಶ್ರೀ ಶಶಿಧರ ಶರ್ಮ, ಪರ್ಕಳ | 10,000 |
| 05. | ಶ್ರೀ ಶ್ರೀನಿವಾಸ ರಾವ್, ಕಾಪು | 10,000 |

(ಮುಂದುವರಿಯುವುದು....)

ಸಮಾಜ ಬಾಂಧವರಿಂದ ಇನ್ನೂ ಹೆಚ್ಚಿನ ಧನಸಹಾಯವನ್ನು ನಿರೀಕ್ಷಿಸುತ್ತೇವೆ

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ–576102.
ಫೋನ್ : 0820–2958444, 8971185844

ಆತ್ಮೀಯ ಸಮಾಜ ಬಾಂಧವರೇ,

ಸಂಘದ ವತಿಯಿಂದ ಅನೇಕ ಕಾರ್ಯಕ್ರಮಗಳು ಜರಗಲಿದ್ದು, ಅವುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಮಾಜ ಬಾಂಧವರೆಲ್ಲರೂ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುತ್ತೇವೆ.

**ನಾಗರ ಪಂಚಮಿ**
ತಾ.21-08-2023ನೇ ಸೋಮವಾರ, ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00ರ ತನಕ

**ವರಮಹಾಲಕ್ಷ್ಮೀ ವ್ರತ**
ತಾ.25-08-2023ನೇ ಶುಕ್ರವಾರ
ಸಂಜೆ 5-00ರಿಂದ
(ಫಲಾಹಾರದ ವ್ಯವಸ್ಥೆ ಇದೆ)

**ಹೂವಿನ ಪೂಜೆ**
(ಮಹಿಳಾ ವೇದಿಕೆಯ ವತಿಯಿಂದ)
ತಾ.01-09-2023ನೇ ಶುಕ್ರವಾರ
ಸಮಯ : ಸಂಜೆ 5-00 ಗಂಟೆಗೆ

**ಋಗುಪಾಕರ್ಮ**
ತಾ.29-08-2023ನೇ ಮಂಗಳವಾರ, ಬೆಳಿಗ್ಗೆ 10-00ರಿಂದ ಅಪರಾಹ್ನ 12-15ರ ತನಕ
(ಕಾರ್ಯಕ್ರಮದ ನಂತರ ಪ್ರಸಾದ ಭೋಜನ ಇದೆ.)

ಶ್ರೀ ಕೆ. ಮಂಜುನಾಥ ಹೆಬ್ಬಾರ್, ಅಧ್ಯಕ್ಷರು
ಶ್ರೀ ಪಿ. ಪ್ರಭಾಕರ ಭಂಡಿ, ಕಾರ್ಯದರ್ಶಿ
ಶ್ರೀ ಕೆ. ಗಣೇಶ್ ಹೆಬ್ಬಾರ್, ಕೋಶಾಧಿಕಾರಿ
ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

## ಶ್ರೀ ಶಾರದಾ ಮಂಟಪದಲ್ಲಿ ಸಂಭ್ರಮದ 'ಆಟಿಯ ಆಟ–ಕೂಟ–ಊಟ'

ವರದಿ : ಡಾ। ಎಂ. ಶಾಮರಾವ್,
ಮುಖ್ಯವೈದ್ಯಾಧಿಕಾರಿ ಜಿಲ್ಲಾ ಆಸ್ಪತ್ರೆ, ಉಡುಪಿ





ನಮ್ಮ ಪೂರ್ವಜರು ನೂರಾರು ಸಂವತ್ಸರಗಳಿಂದ ಆಚರಿಸುತ್ತಾ ಬಂದಿರುವ ಸಂಪ್ರದಾಯದತ್ತ ಒಂದು ವಿಹಂಗಮ ನೋಟವನ್ನು ಹರಿಸಿದಾಗ, ನಮಗೆ ಈ ಮೂರು ವಿಷಯಗಳು ಪ್ರಾಮುಖ್ಯವೆನಿಸುವುದು. 1. ಧಾರ್ಮಿಕ ಆಚರಣೆಗಳು 2. ಆರೋಗ್ಯದ ರಕ್ಷಣೆ 3. ಮನೋರಂಜನೆ

ಆಸ್ತಿಕರಾಗಿರುವ ನಾವು ಜೀವನವನ್ನು ಸುಖಮಯವಾಗಿ ಸಾಗಿಸಲು ಬೇಕಾಗಿರುವ ದೈವ–ದೇವರುಗಳ ಅನುಗ್ರಹ ಪಡೆಯಲು ಮತ್ತು ಪ್ರಕೃತಿ ಮಾತೆಯ ಶ್ರೀರಕ್ಷೆಗಾಗಿ, ಕಾಲಕ್ಕೆ ತಕ್ಕಂತೆ, ವಿಧವಿಧವಾದ ಪೂಜೆ–ಪುನಸ್ಕಾರಗಳು ಹವನ–ಯಜ್ಞಾದಿಗಳನ್ನು, ದೈವರಾಧನೆ, ಗದ್ದೆ ಪೂಜೆ ಇತ್ಯಾದಿಗಳನ್ನು ಹಿರಿಯರ ಮತ್ತು ವೈದಿಕರ ಮಾರ್ಗದರ್ಶನದಂತೆ ಆಚರಿಸುತ್ತಾ ಬಂದಿದ್ದೇವೆ. ನಮ್ಮ ಮಕ್ಕಳಿಗೂ 'ಸಂಸ್ಕಾರ' ವಿಧಿಗಳನ್ನೂ ನಡೆಸುತ್ತೇವೆ.

ಅನಾದಿ ಕಾಲದಿಂದಲೂ ಆಯುರ್ವೇದ ಮತ್ತು ಜಾನಪದ ವೈದ್ಯ ಹಾಗೂ ಕೃಷಿಜ್ಞಾನದಿಂದ, ದೀರ್ಘಾಯಸ್ಸು ಮತ್ತು ಆರೋಗ್ಯ ಭಾಗ್ಯಕ್ಕಾಗಿ, ಯಥಾವಿಧಿ ಆಹಾರ ನಿಯಮಗಳನ್ನು ಪಾಲಿಸುತ್ತಾ ಬಂದಿದ್ದೇವೆ. ನಮ್ಮ ಆರೋಗ್ಯಕ್ಕೆ ಯಾವುದು ಹಿತ ಆಹಾರ ಯಾವುದು ಅಹಿತ ಎಂಬುವುದನ್ನು ನಮ್ಮ ಹಿಂದಿನ ಜ್ಞಾನಿಗಳು ಮನಗಂಡು ಆಯಾಯ ಋತುಗಳಿಗೆ ಮತ್ತು ಶರೀರ ಪ್ರಕೃತಿಗೆ ಸೂಕ್ತವಾದ 'ಆಹಾರ ಪದ್ಧತಿ' ಮತ್ತು 'ವಿಹಾರ'ಗಳನ್ನು ನಿರ್ಧರಿಸಿರುತ್ತಾರೆ. ಅಂತೆಯೇ ನಾವು ಸಾತ್ವಿಕ ಆಹಾರವನ್ನೇ ಸೇವಿಸಬೇಕು.

ಆಟಿ ತಿಂಗಳ ಅಮಾವಾಸ್ಯೆಯಂದು ಬೆಳಿಗ್ಗೆ ನಾವು ಕುಡಿಯುವ ಹಾಲೆ ಮರದ ಚೆಕ್ಕೆಯ ಕಷಾಯ ಕುಡಿಯುವುದರಿಂದ ಮಳೆಗಾಲದಲ್ಲಿ ಬರಬಹುದಾದ ಜ್ವರ, ಶೀತ, ಕೆಮ್ಮು ಇನ್ನಿತರ ರೋಗಗಳು ಬಾರದಂತೆ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಈ ಕಷಾಯವು ಜೀರ್ಣಕ್ರಿಯೆಗೆ ಸಹಕಾರಿ. ಆಟಿ ತಿಂಗಳಿನಲ್ಲಿ ಸ್ವಾಭಾವಿಕವಾಗಿ ಬೆಳೆಯುವ ತಜಂಕು, ಕೆಸು, ಕಣಿಲೆ, ಬಾಳೆದಿಂಡು, ಹಲಸು, ಅರಶಿನೆಲೆ, ಇತ್ಯಾದಿಗಳನ್ನು ಉಪಯೋಗಿಸಿ ಮಾಡುವ ಗಟ್ಟಿ, ಪತ್ರೊಡೆ, ಸಾಂಬಾರು, ಪಲ್ಯ, ಕಡುಬು ಇತ್ಯಾದಿ ಖಾದ್ಯಗಳು – ತಿಂಡಿಗಳು ಅತೀ ಹೆಚ್ಚು ಪೌಷ್ಟಿಕಾಂಶಗಳನ್ನು ಹೊಂದಿದ್ದು, ನಮ್ಮ ಆರೋಗ್ಯಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ.

ವಿರಾಮದ ವೇಳೆಯಲ್ಲಿ ನಮ್ಮ ಹಿರಿಯರು ಮನೆ ಮಂದಿಯೆಲ್ಲಾ ಸೇರಿ, ಚೆನ್ನೆಮಣೆ, ಕವಡೆ, ಚದುರಂಗ, ಕಲ್ಲಾಟ ಮುಂತಾದ ಆಟಗಳನ್ನೇ ಆಡಿ ಆನಂದಿಸುತ್ತಿದ್ದರು. ಕಾಲದೊಂದಿಗೆ ಜೀವನ ಶೈಲಿಯು ಬದಲಾಗುತ್ತಿದ್ದಂತೆ ಯುವ ಪೀಳಿಗೆಯು ಪುರಾತನ ಆಚರಣೆಗಳನ್ನು ಮರೆಯುತ್ತಾ ಆಧುನೀಕತೆಗೆ ಒಗ್ಗಿಕೊಂಡಿದೆ. ಅದು ಅನಿವಾರ್ಯವೂ ಆಗಿದೆ.

'ಆಟಿಯ ಆಟ–ಕೂಟ–ಊಟ' ದಂತಹ ಕಾರ್ಯಕ್ರಮಗಳನ್ನು ನಡೆಸುವುದರ ಮುಖಾಂತರ ಸಮಾಜ ಬಾಂಧವರನ್ನು ಒಂದುಗೂಡಿಸಿ ನಮ್ಮ ಶ್ರೀಮಂತ ಸಂಪ್ರದಾಯದ 'ಸಿಹಿ ತತ್ವ'ವನ್ನು ಎಲ್ಲರೂ ಸವಿಯುವಂತೆ ಮಾಡುವುದೇ ಸಂಘದ ಉದ್ದೇಶವಾಗಿದೆ. ಎಳೆಯರಿಗೆ ಸಂಪ್ರದಾಯಗಳ ಬಗ್ಗೆ ತಿಳುವಳಿಕೆಯೂ ಮೂಡುವುದು.

ಈ ಹಿನ್ನಲೆಯಲ್ಲಿ ತಾ.06.08.2023 ರಂದು ಆದಿತ್ಯವಾರ ಸಂಜೆ 5 ರಿಂದ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿಯು ಶ್ರೀ ಶಾರದಾ ಮಂಟಪದಲ್ಲಿ 'ಆಟಿಯ ಆಟ–ಕೂಟ–ಊಟ' ವಿಶಿಷ್ಟ ಕಾರ್ಯಕ್ರಮವನ್ನು ಆಯೋಜಿಸಿತ್ತು.


(5ನೇ ಪುಟಕ್ಕೆ...)




ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ – 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# 'ಸಂಭವಾಮಿ ಯುಗೇ ಯುಗೇ'

ವೈ.ಮೋಹನ್ ರಾವ್




ಈ ಪುಸ್ತಕದಲ್ಲಿ 5 ಅಧ್ಯಾಯಗಳು ಇವೆ. 1. ತತ್ತ್ವಜ್ಞಾನ ಎಂದರೇನು? ತತ್ತ್ವಜ್ಞಾನಿಗಳು ಯಾರು? 2. ಭರತಖಂಡದ ದಾರ್ಶನಿಕರು 3. ಎಂಟನೆಯ ಶತಮಾನವೆಂಬ ಸಂಧಿಕಾಲ 4. ಧ್ರುವತಾರೆ ಶ್ರೀ ಆದಿ ಶಂಕರಾಚಾರ್ಯರು 5. ಉಪಸಂಹಾರ

ಮೊದಲನೆಯ ಅಧ್ಯಾಯದಲ್ಲಿ ಲೇಖಕರು ಹೇಳುತ್ತಾರೆ – "ತತ್ತ್ವ" ಎಂಬ ಶಬ್ದದ ಅರ್ಥವು "ಸತ್ಯ" ಎಂಬುದಾಗಿದೆ. ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಸತ್ಯ ಎನ್ನುವ ಶಬ್ದಕ್ಕೆ ಎಲ್ಲೆಡೆಯೂ ಯಾವಾಗಲೂ ನೆಲೆನಿಂತಿರುವಂತಹಾ ಪದಾರ್ಥ ಎನ್ನುವ ಅರ್ಥ ಇದೆ. ತತ್ತ್ವಜ್ಞಾನಿ ಎಂದರೆ ಈ ಸತ್ಯವನ್ನು ತಿಳಿದಿರುವವನು ಎಂದರ್ಥೈಸಿಕೊಳ್ಳಬಹುದು.

ಯುದ್ಧ ಹೋರಾಟಗಳು ಮಾನವನ ಇತಿಹಾಸದಲ್ಲಿ ಹೊಸದೇನಲ್ಲ. ಯುದ್ಧಗಳನ್ನು ತಡೆದು ಶಾಂತಿಯನ್ನು ಸ್ಥಾಪಿಸುವುದು ವಿಜ್ಞಾನದಿಂದಾಗದ ಕೆಲಸ. ಈ ಕೆಲಸಕ್ಕೆ ತತ್ತ್ವಜ್ಞಾನವೇ ಬೇಕು. ಅಂತೆಯೇ ಕಾಲಕಾಲಕ್ಕೆ ದಾರ್ಶನಿಕರು ಹುಟ್ಟಿಬಂದು ಅನಗತ್ಯ ರಕ್ತಪಾತಗಳನ್ನು ನಿಲ್ಲಿಸಿ ಶಾಂತಿಸ್ಥಾಪನೆಗೆ ಪ್ರಯತ್ನಿಸಿರುವ ಪ್ರಕ್ರಿಯೆ ಪ್ರಪಂಚದಾದ್ಯಂತ ನಡೆದಿದೆ. ತತ್ತ್ವಜ್ಞಾನದ ಮುಂಚೂಣಿಯಲ್ಲಿರುವ ಭರತಖಂಡದಲ್ಲೂ ಹಲವಾರು ದಾರ್ಶನಿಕರು ಕಾಲಕಾಲಕ್ಕೆ ಅವತರಿಸಿ ನಮ್ಮನ್ನು ಮುನ್ನಡೆಸಿದ್ದಾರೆ. ಅವರಲ್ಲಿ ಶ್ರೀ ಶಂಕರಾಚಾರ್ಯರು ಪ್ರಮುಖರು.

ಎರಡನೆ ಅಧ್ಯಾಯದಲ್ಲಿ ಲೇಖಕರು ಹೇಳುತ್ತಾರೆ – ಧರ್ಮಾಚರಣೆಯಲ್ಲಿ ಶ್ರದ್ಧೆ ಕಡಮೆಯಾದಂತೆ, ಗೊಂದಲಗಳು ಉದಿಸಿದಂತೆ, ವಿಕೃತಿಗಳು ವಿಜೃಂಭಿಸಿದಂತೆ ಕಾಲಕಾಲಕ್ಕೆ ಈ ಭರತಖಂಡದಲ್ಲಿ ದಾರ್ಶನಿಕರು ಹುಟ್ಟಿಬಂದು ಧರ್ಮಸ್ಥಾಪನೆಗೆ ಪ್ರಯತ್ನಿಸಿದ್ದಾರೆ. ಧರ್ಮಸಂಕಟದಲ್ಲಿದ್ದ ಅರ್ಜುನನಿಗೆ ಭಗವದ್ಗೀತೆಯನ್ನು ಬೋಧಿಸಿದ ಶ್ರೀ ಕೃಷ್ಣನ ನಂತರ ಈ ಭರತಖಂಡದಲ್ಲಿ ಹುಟ್ಟಿದ ದಾರ್ಶನಿಕರಲ್ಲಿ ಭಗವಾನ್ ಮಹಾವೀರರು ಹಾಗೂ ಗೌತಮ ಬುದ್ಧರು ಪ್ರಸಿದ್ಧರು. ಮಹಾವೀರ ಹಾಗೂ ಗೌತಮಬುದ್ಧರು ಸರಿಸುಮಾರು ಎರಡುವರೆ ಸಾವಿರ ವರ್ಷಗಳ ಹಿಂದೆ ಹುಟ್ಟಿದವರು. ಗೌತಮ ಬುದ್ಧರ ಹಾಗೂ ಮಹಾವೀರರ ಬೋಧನೆಗಳಲ್ಲೂ ಸನಾತನ ಧರ್ಮದ ಆಶಯಗಳೇ ಪ್ರತಿನಿಧಿಸಿವೆ. ಇವರಿಬ್ಬರ ಕಾಲದಲ್ಲಿ ರಾಜಕೀಯವಾಗಿ ಭಾರತವು ಬಲಿಷ್ಠವಾಗಿತ್ತು. ಬಿಂಬಿಸಾರ, ಚಂದ್ರಗುಪ್ತ ಮೌರ್ಯ, ಬಿಂದುಸಾರ, ಅಶೋಕ ಚಕ್ರವರ್ತಿಯಂತಹ ಬಲಶಾಲಿ ಚಕ್ರವರ್ತಿಗಳ ಆಡಳಿತದಲ್ಲಿ ಭಾರತದ ನಾಗರಿಕತೆ ಸುಭದ್ರವಾಗಿತ್ತು. ಚಾಣಕ್ಯನ ಮಾರ್ಗದರ್ಶನದಲ್ಲಿ ಚಂದ್ರಗುಪ್ತನ ಸಾಮ್ರಾಜ್ಯ, ಅನಂತರ ಅಶೋಕ ಚಕ್ರವರ್ತಿಯ ಸಾಮ್ರಾಜ್ಯಗಳು ಅಫಘಾನಿಸ್ಥಾನದ ಹಿಂದೂಕುಶ್ ಪರ್ವತ ಶ್ರೇಣಿಯಿಂದ ಹಿಡಿದು ಪೂರ್ವದ ಬಂಗಾಲದ ತನಕ, ಉತ್ತರದ ಹಿಮಾಲಯದಿಂದ ಹಿಡಿದು ದಕ್ಷಿಣದ ಕರ್ನಾಟಕದ ತನಕ ಹರಡಿದ್ದವು. ಇತಿಹಾಸದಲ್ಲಿ ಭಾರತವು ರಾಜಕೀಯವಾಗಿ ಅಖಂಡವಾಗಿದ್ದ

(3ನೇ ಪುಟಕ್ಕೆ...)

ಸಂಪಾದಕ ಮಂಡಳಿ
ಶ್ರೀ ಯು. ಅರವಿಂದ ಕುಮಾರ್
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಮಧುಸೂಧನ ರಾವ್ ಕುಂಜಾರುಗಿರಿ
ಡಾ। ಶ್ರೀಮತಿ ವಿಜಯ ರಾವ್ ವೈ.ಬಿ.
★★★★ ★★★★
ಸಲಹೆಗಾರರು :
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ
ಶ್ರೀ ಕೆ. ವೇಣುಗೋಪಾಲರಾವ್, ಅಂಬಲಪಾಡಿ

# ಸಂತೋಷ್ ಅನಂತಪುರ ರವರಿಗೆ ಪ್ರಶಸ್ತಿ



ಇನ್ಫೋಸಿಸ್ ಅವಾರ್ಡ್ ಫಾರ್ ಎಕ್ಸಲೆನ್ಸ್ ಗೋಲ್ಡ್ 2021–22, ಗ್ಲೋಬಲ್ ಪ್ರಶಸ್ತಿ ಪಡೆದ ಸಂತೋಷ್ ಅನಂತಪುರ ಇವರು ನಮ್ಮ ಸ್ಥಾನಿಕ ಸಮಾಜದ ಎಲೆಮರೆಯ ಕಾಯಿಯಂತಿರುವ ಪ್ರತಿಭೆ.

1975 ಜುಲೈ 2 ರಂದು ಶ್ರೀಕೃಷ್ಣಯ್ಯ ಮತ್ತು ಜಯಶ್ರೀ ದಂಪತಿಯ ಸುಪುತ್ರನಾಗಿ 'ಅನಂತಪುರ' ಮನೆತನದಲ್ಲಿ ಜನಿಸಿದರು. ಇವರ ತಂದೆ ಶ್ರೀಕೃಷ್ಣಯ್ಯ ಅನಂತಪುರ ನಾಡಿನ ಖ್ಯಾತ ಕವಿ. ದೊಡ್ಡಪ್ಪ ದಿ। ಎ. ಈಶ್ವರಯ್ಯ ಪ್ರಸಿದ್ಧ ಸಾಹಿತಿ, ಕಲಾವಿಮರ್ಶಕ, ಪತ್ರಕರ್ತ ಹಾಗೂ 'ತುಷಾರ' ಮಾಸಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದವರು.

(6ನೇ ಪುಟಕ್ಕೆ...)

# ಬೆಳವಾಡಿಯ ನೆಲದಲ್ಲೊಂದು ಸುಂದರ ಕಲಾಕೃತಿ



ವಿಶ್ವವಿಖ್ಯಾತ ಬೇಲೂರು, ಹಳೇಬೀಡು ದೇವಾಲಯಗಳು ಹತ್ತನೇ ಶತಮಾನದಿಂದ ಹದಿನಾಲ್ಕನೇ ಶತಮಾನದವರೆಗೆ ನಮ್ಮ ನಾಡನ್ನಾಳಿದ ಹೊಯ್ಸಳರ ಕಾಲದ ಅಮೂಲ್ಯ ಶಿಲ್ಪಕಲಾಕೃತಿಗಳು. ಇವುಗಳು ಬರೀ ಶಿಲಾ ದೇಗುಲಗಳಲ್ಲ, ಅಂದಿನ ಆಡಳಿತದಲ್ಲಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಕಲಾ ಶ್ರೀಮಂತಿಕೆಯ ಕುರುಹುಗಳಾಗಿವೆ. ಇಂತಹ ದೇಗುಲಗಳಲ್ಲಿ ಚಿಕ್ಕಮಗಳೂರಿನ ಸಮೀಪದ ಬೆಳವಾಡಿಯ ಶ್ರೀ ವೀರನಾರಾಯಣಸ್ವಾಮಿ ದೇಗುಲವೂ ಒಂದು. ಕ್ರಿ.ಶ. ಸಾವಿರದ ಇನ್ನೂರರಲ್ಲಿ ವೀರ ಬಲ್ಲಾಳ ಮತ್ತು ನರಸಿಂಹ ಬಲ್ಲಾಳ ಅರಸರ ಅವಧಿಯಲ್ಲಿ ರಚಿತವಾದ ತ್ರಿಕೂಟಾಚಲ ದೇಗುಲವಾಗಿದೆ. ದೇವಾಲಯದ ಸಮುಚ್ಚಯ ಪ್ರವೇಶಿಸುತ್ತಿದ್ದಂತೆ ದ್ವಾರ ಮಂಟಪದ ಎರಡು ಬದಿಗೆಳ ಸಾಲಂಕೃತ ಕೆತ್ತನೆಯ ಮತ್ತು ಆಕರ್ಷಕ ಭಂಗಿಯ ಆನೆಗಳು ನಿಮ್ಮನ್ನು ಸ್ವಾಗತಿಸುತ್ತವೆ. ಮುಂದೆ ಪ್ರಾಂಗಣಕ್ಕೆ ಕಾಲಿರಿಸುತ್ತಿದ್ದಂತೆ ಎದುರಿನ ಭವ್ಯವಾದ ದೇಗುಲ ನಿಮ್ಮ ಕಣ್ಮನ ಸೆಳೆಯುವುದರೊಂದಿಗೆ, ನೀವು ವಾಹ್!!! ಎಂದು ಉದ್ಗರಿಸುವಂತೆ ಮಾಡುತ್ತದೆ. ಸುಖಾಸೀನವನ್ನೊಳಗೊಂಡ ನವರಂಗದೊಳಗೆ ಪ್ರವೇಶಿಸುತ್ತಿದ್ದಂತೆ, ಒಂದಕ್ಕಿಂತ ಒಂದು ವಿಭಿನ್ನ ಚಿತ್ತಾರಗಳನ್ನೊಳಗೊಂಡ ಹಾಗೂ ಗಾಜಿನಂತೆ ನುಣುಪಾದ ಮೈಗಳನ್ನು ಹೊಂದಿರುವ ದುಂಡಗಿನ ನಲುವತ್ತೈದಕ್ಕೂ ಹೆಚ್ಚು ಕಂಬಗಳು ನಿಮ್ಮನ್ನು ಬಹಳವಾಗಿ ಸೆಳೆಯುವುದರೊಂದಿಗೆ ಮೂಕಸ್ಮಿತರನ್ನಾಗಿ ಸುತದೆ. ಮುಂದಕ್ಕೆ ನೃತ್ಯ ಮಂಟಪ ಮತ್ತು ಸಂಗೀತ ಸೇವೆಯ ಆಕರ್ಷಕ ಮಂಟಪಗಳು ಇದ್ದು, ಎದುರಿನ ಗರ್ಭ ಗುಡಿಯೊಳಗೆ ಸಾಲಿಗ್ರಾಮ ಕರಿಶಿಲೆಯಲ್ಲಿ ಕೆತ್ತಲ್ಪಟ್ಟ ಎಂಟು ಅಡಿ ಎತ್ತರದ, ಹಾಗೂ ಪದ್ಮ, ಗಧೆ ಮತ್ತು ಬಲ ಕೈ ವ್ಯಾಘ್ರ ಹಸ್ತ ಹಾಗೂ ಎಡ ಕೈ ವೀರ ಮುದ್ರೆ ಹೊಂದಿರುವ ಶ್ರೀ ವೀರನಾರಾಯಣ ಸ್ವಾಮಿ ಮೂರ್ತಿ ಕಂಗೊಳಿಸುತ್ತಿದೆ. ಪದತಲದಲ್ಲಿ ಶ್ರೀದೇವಿ ಮತ್ತು ಭೂದೇವಿ ಇದ್ದಾರೆ. ಹಿನ್ನೆಲೆಯ ಪ್ರಭಾವಳಿ ದಶಾವತಾರದ ಕೆತ್ತನೆಯನ್ನೊಳಗೊಂಡಿರುತ್ತದೆ. ಎಡ ಬದಿಯ ಗುಡಿಯಲ್ಲಿ ಉತ್ತರಕ್ಕೆ ಮುಖಮಾಡಿರುವ ಶ್ರೀ ವೇಣುಗೋಪಾಲಸ್ವಾಮಿಯ ಏಳು ಅಡಿ ಎತ್ತರದ ವಿಗ್ರಹ ನೋಡಲು ಬಹಳ ಆಕರ್ಷಕವಾಗಿದ್ದು, ಹಿನ್ನೆಲೆಯಲ್ಲಿ ಬೃಹತ್ ಕಲ್ಪವೃಕ್ಷದೊಂದಿಗೆ ಗೋಪಿಕಾ ಸ್ತ್ರೀಯರು, ಪಶು–ಪಕ್ಷಿಗಳು ಮುರಳಿಯ ನಾದಕ್ಕೆ ಮೈಮರೆತಿರುವ ದೃಶ್ಯ ಸೊಗಸಾಗಿದೆ. ಬಲಬದಿಯ ಗುಡಿಯಲ್ಲಿ ಶ್ರೀದೇವಿ, ಭೂದೇವಿ ಸಹಿತ ದಕ್ಷಿಣಕ್ಕೆ ಮುಖ ಮಾಡಿರುವ ಏಳು ಅಡಿ ಎತ್ತರದ ಶಂಖ–ಚಕ್ರ ಸಹಿತ ಯೋಗಾನರಸಿಂಹ ಸ್ವಾಮಿಯ ಶಾಂತ ಮುಖಭಾವದ ಯೋಗ ಭಂಗಿಯಲ್ಲಿರುವ ಮೂರ್ತಿಯು ನಮ್ಮನ್ನು ಭಾವುಕರನ್ನಾಗಿಸುತದೆ. ಈ ಮೂರು ಮೂರ್ತಿಗಳು ಅಪ್ರತಿಮ ಕಲಾಕೃತಿಗಳು ಎಂದು ಪುರಾತತ್ವ ಇಲಾಖೆ ಹೇಳಿದೆ. ದೇವಾಲಯದ ಒಳಗಿನ ಮೇಲ್ಛಾವಣಿ

(7ನೇ ಪುಟಕ್ಕೆ...)



Dr. Sanath S. Rao
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

JALAJA SKIN CLINIC
1ST FLOOR, SAI HARSHA SQUARE, KOLADAPETE (THENKAPETE),
OLD POST OFFICE ROAD, UDUPI - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.

ಶ್ರೀ ಶಾರದಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ (ನಿ.)
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 10.00%
(ಷರತ್ತುಗಳು ಅನ್ವಯ)

| | | |
|---|---|---|
| ಗೃಹ ಸಾಲ | : | 10.5% |
| ವಾಹನ ಸಾಲ | : | 12.5% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12% |

ಆಭರಣ ಸಾಲಕ್ಕೆ ಯಾವುದೇ ಸೇವಾ ಶುಲ್ಕ, ತೆರಿಗೆ ಇರುವುದಿಲ್ಲ.

ಠೇವಣಿಗಳ ಬಡ್ಡಿದರ

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷದಿಂದ 3 ವರ್ಷದ ತನಕ | : 8.5% |
| 3 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% | | |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2016–17ರಿಂದ 2021–22ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ
ಪ್ರಧಾನ ಕಛೇರಿ (☎ 2522408) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114) ಬ್ರಹ್ಮಾವರ ಶಾಖೆ (☎ 2003456)
ಕುಕ್ಕಿಕಟ್ಟೆ ಶಾಖೆಯನ್ನು ಪ್ರಧಾನ ಕಛೇರಿಯೊಂದಿಗೆ ವಿಲೀನಗೊಳಿಸಲಾಗಿರುತ್ತದೆ. ಗ್ರಾಹಕ ಸದಸ್ಯರು ಸಹಕರಿಸಬೇಕಾಗಿ ವಿನಂತಿ

GST : 29AKMPN4985H1ZD
ಶ್ರೀ ಕೃಷ್ಣ ಎಲೆಕ್ಟ್ರಾನಿಕ್ಸ್ & ಎಲೆಕ್ಟ್ರಿಕಲ್ಸ್
Mob. 9448953022
SHREE KRISHNA
ELECCTRONICS & ELECTRICALS
Sri Balaji Complex, Shop No-G-7, Near KSRTC Bus Stand, Udupi - 576101.
City Towers, Service Bus Stand, Near Rao and Rao Circle, State Bank, Mangalore - 575001
Branch at Mahalaxmi Prabha Complex, Market Road, Opp Tajmahal Hotel, Karkala

## 'ಸಂಭವಾಮಿ ಯುಗೇ ಯುಗೇ'

ಕಾಲವೆಂದರೆ ಈ ಕಾಲದಲ್ಲಿ ಮಾತ್ರ . ಅಷ್ಟು ಬಲಶಾಲಿಯಾಗಿತ್ತು ನಮ್ಮ ಭಾರತ. ಅಲೆಕ್ಸಾಂಡರ್‌ನಂತಹ ವಿದೇಶಿ ರಾಜರುಗಳು ಆಕ್ರಮಣ ಮಾಡಿದರೂ ಕೂಡಾ ಅವರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಗಿತ್ತು. ಆದರೆ ಕ್ರಿಸ್ತ ಪೂರ್ವ ಮೂರನೇ ಶತಮಾನದ ಅಶೋಕ ಚಕ್ರವರ್ತಿಯ ಕಾಲಾನಂತರ ಕ್ರಿಸ್ತಶಕ ಎಂಟನೆಯ ಶತಮಾನದ ಹೊತ್ತಿಗೆ ಭರತ ಖಂಡದಲ್ಲಿ ರಾಜಕೀಯ ಶಕ್ತಿ ಕುಗ್ಗುತ್ತಾ ಬಂದಿತು. ಜೊತೆಗೆ ಧಾರ್ಮಿಕವಾಗಿಯೂ ಒಡಕು ಶುರುವಾಗಿ ಒಂದು ರೀತಿಯ ವಿಪ್ಲವ ಆರಂಭವಾಗಿತ್ತು. ಆ ಧರ್ಮವಿಪ್ಲವವನ್ನು ಕೊನೆಗಾಣಿಸಿ ಸಮಸ್ತ ಧರ್ಮಜಾತಿಗಳನ್ನು ಒಗ್ಗೂಡಿಸಿ ಈ ಭರತಖಂಡದ ಅಖಂಡತೆಯನ್ನು ಮರುಸ್ಥಾಪಿಸಿದವರು ಶ್ರೀ ಶಂಕರಾಚಾರ್ಯರು.

ಮೂರನೆಯ ಅಧ್ಯಾಯದಲ್ಲಿ ಲೇಖಕರು ಹೇಳುತ್ತಾರೆ – ಭರತಖಂಡದ ತತ್ತ್ವಜ್ಞಾನದ ಭೂಮಿಕೆಯಲ್ಲಿ ಸುಧಾರಣೆಗಳನ್ನು ತರಲು ಶ್ರಮಿಸಿದ ಮಹಾವೀರರು ಹಾಗೂ ಗೌತಮ ಬುದ್ಧರ ನಿರ್ವಾಣದ ನಂತರ ಅವರ ಅನುಯಾಯಿಗಳು ತಮ್ಮನ್ನು ಪ್ರತ್ಯೇಕ ಧರ್ಮವಾಗಿ ಗುರುತಿಸಿಕೊಂಡು ಈ ಭೂಭಾಗದ ಸನಾತನ ಸಂಸ್ಕೃತಿಯೊಂದಿಗೆ ಪ್ರತ್ಯೇಕತೆಯನ್ನು ಸಾರಿದರು. ಬೌದ್ಧ ಧರ್ಮದಲ್ಲೂ ಹಲವಾರು ಪಂಥಗಳು ಮೂಡಿದ್ದವು. ಈ ಪಂಥಗಳೊಳಗೂ ಒಮ್ಮತ ಇರಲಿಲ್ಲ. ಬುದ್ಧರು ಖಂಡಿಸಿದ್ದ ಮೂರ್ತಿ ಪೂಜೆ ಇಲ್ಲೂ ಆರಂಭವಾಗಿತ್ತು. ಜ್ಞಾನವೃದ್ಧಿಯನ್ನು ಹಿನ್ನೆಲೆಗೆ ತಳ್ಳಿ ಕರ್ಮಾಚರಣೆಯೇ ಮುನ್ನೆಲೆಗೆ ಬಂತು. ಹೀಗೆ ದಿನೇದಿನೇ ಗೌತಮ ಬುದ್ಧರ ಆಶಯಗಳಿಗೆ ವಿರುದ್ಧವಾಗಿ ಬೌದ್ಧ ಧರ್ಮ ಹೆಜ್ಜೆ ಹಾಕುತಿತ್ತು.

ಹೀಗೆ ಕ್ರಿ.ಶ. ಎಂಟನೆಯ ಶತಮಾನದ ಸಮಯದಲ್ಲಿ ನಮ್ಮ ದೇಶದಲ್ಲಿ ನೂರಾರು ರಾಜರಿದ್ದರು ಆದರೆ ಒಳಜಗಳವಿತ್ತು, ಸಾಂಸ್ಕೃತಿಕವಾಗಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಆದರೆ ಭಿನ್ನಾಭಿಪ್ರಾಯಗಳು ಇದ್ದವು, ಧಾರ್ಮಿಕವಾಗಿ ನೂರಾರು ಚಿಂತನೆಗಳು ಇದ್ದವು ಆದರೆ ಭೇದಭಾವಗಳು ಮೇಳೈಸುತ್ತಿದ್ದವು. ಆದುದರಿಂದ ಆಗ ಸಮನ್ವಯಕಾರನ ಕೊರತೆಯಿಂದ ಭಾರತದ ಅಸ್ತಿತ್ವ ಅಪಾಯದಲ್ಲಿತ್ತು ಎನ್ನಬಹುದು. ಇಂತಹಾ ಸಂದರ್ಭದಲ್ಲಿ ವಿವಿಧತೆಗಳಲ್ಲಿ ಏಕತೆಯನ್ನು ತರಲು, ವೈವಿಧ್ಯತೆಗಳೇ ವಿಶೇಷತೆ ಎಂದು ಸಾರಲು ಧ್ರುವತಾರೆಯಾಗಿ ಹುಟ್ಟಿಬಂದವರು ಶ್ರೀ ಆದಿಶಂಕರಾಚಾರ್ಯರು.

ನಾಲ್ಕನೆಯ ಅಧ್ಯಾಯದಲ್ಲಿ ಲೇಖಕರು ಹೇಳುತ್ತಾರೆ – ಶ್ರೀ ಗೋವಿಂದ ಭಗವತ್ಪಾದರ ಆದೇಶದಂತೆ ಶ್ರೀ ಶಂಕರರು ಮೊತ್ತ ಮೊದಲಾಗಿ ವಾರಣಾಸಿಗೆ ತೆರಳಿ ಅದ್ವೈತ ತತ್ತ್ವದ ಪ್ರಸಾರದ ಕೆಲಸವನ್ನು ಆರಂಭಿಸಿದರು. ವಾರಣಾಸಿಯಲ್ಲಿ ತನ್ನ ಕೆಲಸವನ್ನು ಆರಂಭಿಸುವಂತೆ ಗುರುಗಳು ಸೂಚಿಸಲೂ ಒಂದು ಕಾರಣವಿತ್ತು. ವಾರಣಾಸಿಯು ವಿದ್ವಾಂಸರಿಂದ ತುಂಬಿ ಪ್ರಸಿದ್ಧವಾದ ಪ್ರದೇಶ. ಅಂತೆಯೇ ಅಭಿಪ್ರಾಯದಲ್ಲಿ ವಿರೋಧ, ನಂಬಿಕೆಯಲ್ಲಿ ಭೇದ, ಆಚರಣೆಯಲ್ಲಿ ದ್ವಂದ್ವಗಳಿಗೂ ಈ ಪಟ್ಟಣ ಪ್ರಸಿದ್ಧಿಯಾಗಿತ್ತು. ವಾರಣಾಸಿಯ ಪಂಡಿತರನ್ನು ಗೆದ್ದರೆ ಇಡೀ ದೇಶದ

■...1ನೇ ಪುಟದಿಂದ

ಪಂಡಿತರನ್ನು ಗೆದ್ದಂತೆ ! ಶ್ರೀ ಶಂಕರರು ವಾರಣಾಸಿಗೆ ತೆರಳಿದವರೇ ಗುರುಗಳ ಆದೇಶವಿದ್ದಂತೆ ಮೊತ್ತಮೊದಲಾಗಿ ಉಪನಿಷತ್ತುಗಳು, ಬ್ರಹ್ಮಸೂತ್ರಗಳು ಹಾಗೂ ಭಗವದ್ಗೀತೆ ಗ್ರಂಥಗಳಿಗೆ ಭಾಷ್ಯಗಳನ್ನು ಬರೆದರು. ಭಾಷ್ಯ ಎಂದರೆ ಮೂಲಗ್ರಂಥದಲ್ಲಿರುವ ಶ್ಲೋಕಗಳಿಗೆ ವಿಸ್ತಾರವಾದ ಅರ್ಥಗಳನ್ನು ಬರೆಯುವುದು ಎಂದರ್ಥ. ಈ ಭಾಷ್ಯಗಳನ್ನು ಬರೆಯುವ ಮುಖಾಂತರ ಹಾಗೂ ವಿದ್ವಾಂಸರಿಗೆ ಈ ಅರ್ಥಗಳನ್ನು ಮನವರಿಕೆ ಮಾಡುವ ಮುಖಾಂತರ ಸ್ವತಃ ವಿದ್ವಾಂಸರೊಳಗೆ ಈ ಗ್ರಂಥಗಳ ಅರ್ಥದ ಮೇಲಿದ್ದ ಸಂಶಯಗಳನ್ನು ಹಾಗೂ ದ್ವಂದ್ವಗಳನ್ನು ನಿವಾರಿಸಿ ನಿಜವಾದ ಅರ್ಥವನ್ನು ಸಾಧಿಸಿ ಪ್ರಮಾಣಿಸಿದರು. ವೇದಗಳನ್ನು ಚತುರ್ವೇದಗಳಾಗಿ ವಿಂಗಡಿಸಿದ್ದ ವೇದವ್ಯಾಸರೇ ಸ್ವತ: ವೃದ್ಧಬ್ರಾಹ್ಮಣನ ವೇಷದಲ್ಲಿ ಶ್ರೀ ಶಂಕರರ ಬಳಿ ಸಂವಾದ ನಡೆಸಿ ತೃಪ್ತರಾಗಿ ಆಶೀರ್ವದಿಸಿದ್ದರು. ಕಾಲಕ್ರಮೇಣ ಐತರೇಯ ಉಪನಿಷತ್, ಬೃಹದಾರಣ್ಯಕ, ಈಶಾವಾಸ್ಯೋಪನಿಷತ್, ತೈತ್ತಿರೇಯ, ಕಠೋಪನಿಷತ್, ಪ್ರಶ್ನೋಪನಿಷತ್, ಛಾಂದೋಗ್ಯ ಉಪನಿಷತ್, ಯಜುರ್ವೇದ, ಮಾಂಡೂಕ್ಯ ಉಪನಿಷತ್, ಗೌಡಪಾದ ಕಾರಿಕ, ಮಹಾಭಾರತದ ಸನತ್ಸುಜಾತೀಯ, ವಿಷ್ಣು ಸಹಸ್ರನಾಮ, ಇತ್ಯಾದಿ ಇನ್ನೂ ಅನೇಕ ಗ್ರಂಥಗಳಿಗೂ ಭಾಷ್ಯಗಳನ್ನು ಬರೆದರು ಹಾಗೂ ತಮ್ಮ ಶಿಷ್ಯರಿಂದ ವಾರ್ತಿಕೆಗಳನ್ನು ಬರೆಸಿದರು.

ಇದು ವಿದ್ವಾಂಸರ ಮಾತಾಯಿತು. ಇಂತಹ ಕಠಿಣ ವಾಕ್ಯಾರ್ಥಗಳನ್ನು ಅರ್ಥೈಸಿಕೊಳ್ಳಲಾಗದ ಪಾಮರರ ಪಾಡೇನು?. ಮೃತ್ಯುಶಯ್ಯೆಯಲ್ಲಿದ್ದ ಅವರ ತಾಯಿಗೆ ಅವರು ನಿರ್ಗುಣ ತತ್ವದ ಉಪದೇಶವನ್ನು ನೀಡಿದಾಗ ತನಗೆ ಅದನ್ನು ಗ್ರಹಿಸಲು ಸಾಧ್ಯವಾಗುತ್ತಿಲ್ಲವೆಂದು ಆಕೆ ನುಡಿದದ್ದು ಇದಕ್ಕೆ ಉದಾಹರಣೆ. ಇಂತಹಾ ಮುಗ್ಧರಿಗಾಗಿ ಆತ್ಮಶುದ್ಧಿಗಾಗಿ, ಧೈರ್ಯ ಸ್ಥೈರ್ಯ ಮನಃಶಾಂತಿಯನ್ನು ನೀಡುವ ಶ್ಲೋಕಗಳುಳ್ಳ ಪ್ರಕರಣಗ್ರಂಥಗಳನ್ನು ರಚಿಸಿದರು. ಅಚ್ಯುತಾಷ್ಟಕ, ಸೌಂದರ್ಯ ಲಹರಿ, ಶಿವಭುಜಂಗ ಪ್ರಯಾತ, ಕಾಲಭೈರವಾಷ್ಟಕ, ಲಲಿತಾ ಪಂಚರತ್ನ, ಶಾರದಾ ಭುಜಂಗ, ಕನಕಧಾರಾಸ್ತೋತ್ರ, ಗಣೇಶ ಭುಜಂಗ, ಕೃಷ್ಣಾಷ್ಟಕ, ಶ್ರೀವಿಷ್ಣುಭುಜಂಗಪ್ರಯಾತ ಸ್ತೋತ್ರ, ಹನುಮಂತಪಂಚರತ್ನ, ಸುಬ್ರಹ್ಮಣ್ಯಭುಜಂಗ ಹೀಗೆ ನೂರಾರು ಸ್ತೋತ್ರಗಳನ್ನು ರಚಿಸಿದರು. ಈ ಸ್ತೋತ್ರಗಳು ಭಕ್ತಿಪ್ರಧಾನವಾಗಿದ್ದು ದೇವರನ್ನು ಸ್ತುತಿಸುವಂತಹವಾಗಿದ್ದು ಜನಸಾಮಾನ್ಯರಿಗೂ ಅರ್ಥವಾಗುವಂತಿದ್ದವು ಹಾಗೂ ಜನಪ್ರಿಯವಾದುವು. ಮೋಹ ಮುದ್ಗರ ಅಥವಾ ಭಜಗೋವಿಂದಂ ಇವರ ಅತ್ಯಂತ ಜನಪ್ರಿಯ ಕೃತಿ. ಇಹಲೋಕದ ಕ್ಷಣಿಕತೆಯನ್ನೂ, ಪರಮಾತ್ಮನ ಧ್ಯಾನದ ಹಾಗೂ ಅವನ ಕೃಪೆಯ ಅಗತ್ಯವನ್ನೂ ಸಾರಿ ಹೇಳುವ ಇದರ ಶ್ಲೋಕಗಳು ಜಗತ್ತಿನಾದ್ಯಂತ ಪ್ರಸಿದ್ಧವಾಗಿವೆ. ಹೀಗೆ ಭಕ್ತಿಮಾರ್ಗಕ್ಕೂ ಇಂಬು ನೀಡುವ ಮುಖಾಂತರ ಜನಸಾಮಾನ್ಯರಲ್ಲಿ ಸನಾತನ ಧರ್ಮದ ಕಡೆ ಒಲವು ಮೂಡಿಸಿದರು.

ಸನಾತನ ಧರ್ಮದ ಪುನರುತ್ಥಾನದ ಮುಂದಿನ ಹೆಜ್ಜೆಯಾಗಿ ಶ್ರೀ ಶಂಕರರು ಕಾಲ್ನಡಿಗೆಯಲ್ಲಿ ಈ ಭರತಖಂಡವನ್ನು ಮೂರು ಬಾರಿ ಸುತ್ತಿದರು. ಶ್ರೀ ಶಂಕರರು ಭರತಖಂಡವನ್ನು ಮೂರು ಬಾರಿ ಸುತ್ತಿ ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಿದ ಯಾತ್ರೆಗಳನ್ನು ವಿಜಯಯಾತ್ರೆ ಎಂದು ಭಕ್ತರು ಕರೆಯುತ್ತಾರೆ. ಶ್ರೀ ಶಂಕರರ ವಿಜಯ ಯಾತ್ರೆ ಭಾರತದ ಸಮಗ್ರತೆಯನ್ನು ಸಾಧಿಸಲು ಕಟಿಬದ್ಧವಾದ ಕಠಿಣ ಯಾತ್ರೆಯಾಗಿತ್ತು. ಮೈಗೊಂದು ಕಾಷಾಯ ವಸ್ತ್ರವನ್ನು ಸುತ್ತಿಕೊಂಡು, ಕೈಯಲ್ಲಿ ಕಮಂಡಲು ದಂಡವನ್ನು ಹಿಡಿದುಕೊಂಡು, ಬರಿಗಾಲಿನಲ್ಲಿ ಕಾಡುಮೇಡುಗಳನ್ನು ಹತ್ತಿ ಇಳಿದು, ನದಿ ಕೊಳ್ಳಗಳನ್ನು ಈಸಿ ದಾಟಿ, ಕಳ್ಳಕಾಕರಿಂದ ಹಿಂಸ್ರ ಪಶುಗಳಿಂದ ಪಾರಾಗಿ, ಸಿಕ್ಕಿದ ದೇವಾಲಯಗಳಲ್ಲಿ ನಿತ್ಯವಿಧಿಗಳನ್ನು ಪೂರೈಸಿ, ದರ್ಬೆಯ ಚಾಪೆಯಲ್ಲಿ ಮಲಗಿ, ಭಿಕ್ಷಾನ್ನವನ್ನು ಉಂಡು, ಕನ್ಯಾಕುಮಾರಿಯಿಂದ ಹಿಮಾಲಯದ ತನಕ, ದ್ವಾರಕೆಯಿಂದ ಪುರಿಯ ತನಕ ನಡೆದು ತನ್ನ ಜೀವವನ್ನು ಈ ದೇಶಕ್ಕಾಗಿ ಸವೆಸಿದ ಯಾತ್ರೆಯಾಗಿತ್ತು. ಅವರು ಈ ಯಾತ್ರೆಗಳ ಮುಖಾಂತರ ಒಂದು ಪ್ರದೇಶದ ಜನರನ್ನು ಇನ್ನೊಂದು ಪ್ರದೇಶದ ಜನರಿಗೆ ಜೋಡಿಸಿದರು, ಸಂಪರ್ಕದ ಕೊಂಡಿಯಾದರು. ದೇಶವಿಲ್ಲದೇ ಧರ್ಮವಿಲ್ಲ. ಹಾಗೆಯೇ ಧರ್ಮಭೀರುಗಳಾದ ಪ್ರಜೆಗಳಿದ್ದರೆ ಮಾತ್ರ ದೇಶಕ್ಕೆ ಶಾಶ್ವತ ಅಸ್ತಿತ್ವ ಸಾಧ್ಯ. ಶ್ರೀ ಶಂಕರಾಚಾರ್ಯರು ಯಾವುದೇ ರಾಜನ ಸಹಾಯವಿಲ್ಲದೇ, ಸೇನೆಯ ಬಲವಿಲ್ಲದೇ, ರಕ್ತಪಾತವಿಲ್ಲದೇ ಕೇವಲ ತಮ್ಮ ಜ್ಞಾನಬಲದಿಂದ ಈ ದೇಶದ ಜನರಲ್ಲಿ ಸನಾತನ ಧರ್ಮದ ಮೇಲಿನ ನಂಬಿಕೆಯನ್ನು ಮರುಸ್ಥಾಪಿಸಿದರು. ತಮ್ಮ ಸಿದ್ಧಾಂತಗಳನ್ನು ಅನುಸರಿಸುವಲ್ಲಿ ಹಳಿ ತಪ್ಪಿದವರನ್ನು ಮನಗಾಣಿಸಿ ಜಾತಿ ಪಂಥ ಮತ ಭೇದವಿಲ್ಲದಂತೆ ದೇಶದ ಸಂಸ್ಕೃತಿಯ ಮುಖ್ಯವಾಹಿನಿಯಲ್ಲಿ ಕರೆತಂದರು. "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ:...... ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಎಂಬ ಭಗವಂತನ ಉವಾಚದಂತೆ ವಿಪ್ಲವ ಕಾಲದಲ್ಲಿ ಧರ್ಮರಕ್ಷಣೆಗಾಗಿಯೇ ಭಗವಾನ್ ಶಂಕರನು ಭೂಲೋಕದಲ್ಲಿ ಶಂಕರಾಚಾರ್ಯರಾಗಿ ಜನಿಸಿದನು ಎಂದು ಭಕ್ತರು ನಂಬುತ್ತಾರೆ. ಶ್ರೀಶಂಕರಾಚಾರ್ಯರ ಜೀವನವೂ, ಅವರು ತಮ್ಮ ಕಾರ್ಯವನ್ನು ಸಾಧಿಸಿದ ರೀತಿಯೂ ಭಕ್ತರ ಈ ನಂಬಿಕೆಗೆ ಇಂಬು ಕೊಡುವಂತೆಯೇ ಇದೆ. ಹೀಗೆ ಸರ್ವ ಪಂಥಗಳನ್ನು ಒಗ್ಗೂಡಿಸಿ, ಧರ್ಮವನ್ನು ಮರುಸ್ಥಾಪಿಸಿ, ಈ ದೇಶದ ಅಖಂಡತೆಯನ್ನು ಭದ್ರಪಡಿಸಿ ಅವರು ನಿಜಾರ್ಥದಲ್ಲಿ ಎಲ್ಲರಿಗೂ ಗುರುಗಳಾದರು, ಜಗದ್ಗುರುಗಳಾದರು. ತಾವು ಅವತಾರವೆತ್ತಿದ ಉದ್ದೇಶ ಸಮಾಪ್ತಿಯಾದ ನಂತರ ತಮ್ಮ ಮೂವತ್ತೆರಡನೆ ವಯಸ್ಸಿನಲ್ಲಿ ಶ್ರೀ ಕೇದಾರನಾಥ ಕ್ಷೇತ್ರದಲ್ಲಿ ಶರೀರವನ್ನು ತ್ಯಜಿಸಿ ಬ್ರಹ್ಮೈಕ್ಯರಾದರು. ವಾರಣಾಸಿ, ಪ್ರಯಾಗ, ಮಥುರಾ (ಈಗಿನ ಉತ್ತರಪ್ರದೇಶ) ಬದರಿ, ಕೇದಾರನಾಥ (ಈಗಿನ ಉತ್ತರಾಖಂಡ), ಕೈಲಾಸ – ಮಾನಸಸರೋವರ, ಕಾಠ್ಮಂಡು (ನೇಪಾಳ), ಶ್ರೀ ಶಾರದಾ ಸರ್ವಜ್ಞ ಪೀಠ (ಕಾಶ್ಮೀರ), ಉಜ್ಜಯಿನಿ, ಮಾಹಿಶ್ಮತಿ ನಗರ (ಮಧ್ಯಪ್ರದೇಶ), ಕಾಮರೂಪ (ಅಸ್ಸಾಂ), ಸೋಮನಾಥ , ದ್ವಾರಕಾ (ಗುಜರಾತ್), ಪುರಿ (ಒರಿಸ್ಸಾ), ತಿರುಪತಿ , ಶ್ರೀ ಶೈಲ (ಆಂಧ್ರಪ್ರದೇಶ), ಮಧುರೈ, ಕಾಂಚಿ, ರಾಮೇಶ್ವರ, ಕನ್ಯಾಕುಮಾರಿ (ತಮಿಳುನಾಡು) ಕಾಲಡಿ, ತಿಶ್ಶೂರ್ (ಕೇರಳ), ಸುಬ್ರಹ್ಮಣ್ಯ, ಕೊಲ್ಲೂರು, ಗೋಕರ್ಣ, ಶೃಂಗೇರಿ (ಕರ್ನಾಟಕ), ನಾಸಿಕ, ತ್ರ್ಯಂಬಕೇಶ್ವರ, ವಿಧರ್ಭ (ಮಹಾರಾಷ್ಟ್ರ) ಇವು ಶ್ರೀ ಶಂಕರಾಚಾರ್ಯರು ಭೇಟಿ ಇತ್ತ ಉಲ್ಲೇಖಗಳಿರುವ ಪ್ರದೇಶಗಳಲ್ಲಿ ಮುಖ್ಯವಾದುವುಗಳು. ಹೋದಲೆಲ್ಲಾ ವೇದೋಪನಿಷತ್ತುಗಳಲ್ಲಿ ಅಡಕವಾದ ಅದ್ವೈತ ತತ್ತ್ವವನ್ನು ವಿದ್ವಾಂಸರಿಗೂ, ಜನಸಾಮಾನ್ಯರಿಗೂ ಮನಗಾಣಿಸಿದರು. ಹಲವಾರು ವಿದ್ವಾಂಸರು ಅವರ ಶಿಷ್ಯರಾದರು. ಸುರೇಶ್ವರಾಚಾರ್ಯರು, ಪದ್ಮಪಾದಾಚಾರ್ಯರು, ಹಸ್ತಮಲಕಾಚಾರ್ಯರು, ತೋಟಕಾಚಾರ್ಯರು ಇವರ ಶಿಷ್ಯರಲ್ಲಿ ಪ್ರಮುಖರು. ಇವರ ಪ್ರಯತ್ನದಿಂದಾಗಿ ಇಡೀ ಭರತಖಂಡದಲ್ಲಿ ಅದ್ವೈತ ತತ್ತ್ವ ಹರಡಿತು. ಇಂದಿಗೂ ಸಹಾ ಭಾರತೀಯ ತತ್ತ್ವದರ್ಶನ ಹಾಗೂ ಅದ್ವೈತ ತತ್ತ್ವವನ್ನು ಸಮಾನ ಪದಗಳು ಎಂದು ಪರಿಗಣಿಸುತ್ತಾರೆ.

ಐದನೇ ಅಧ್ಯಾಯ 'ಉಪಸಂಹಾರ'ದಲ್ಲಿ ಲೇಖಕರು ಹೇಳುತ್ತಾರೆ – ಜಗತ್ತಿನಲ್ಲಿ ಹಿಂಸೆ, ಅಧರ್ಮ, ಅಸತ್ಯ, ಸ್ವಾರ್ಥಗಳು ಪುನಃ ನೆಲೆದಾಡುತ್ತಿವೆ. ಈ ವ್ಯಾಧಿಗಳಿಗೆ "ಅವು ಎರಡಲ್ಲ, ಒಂದೇ" ಎಂಬ ಶ್ರೀ ಶಂಕರಾಚಾರ್ಯರ ನೀತಿಯೇ ಮದ್ದು. ಅವರ ಉಪದೇಶಗಳು ನಮ್ಮ ಕಣ್ಣು ತೆರೆಸಲಿ, ವಿಶ್ವದೆಲ್ಲೆಡೆ ಶಾಂತಿ ನೆಲೆಸಲಿ, ನಾವು ವಿಶ್ವಮಾನವರಾಗೋಣ. "ವಸುಧೈವ ಕುಟುಂಬಕಂ" ಎಂಬ ಘೋಷಣೆ ಪ್ರಪಂಚದಲ್ಲೆಡೆ ಮಾರ್ದನಿಸಲಿ ಎಂಬ ಆಶಯದೊಂದಿಗೆ ಈ ಪುಸ್ತಕವನ್ನು ಪ್ರಸ್ತುತಪಡಿಸುತ್ತಿದ್ದೇನೆ.

ಶ್ರೀ ಎನ್. ತಿರುಮಲೇಶ್ವರ ಭಟ್, ಹಿರಿಯ ಸಾಹಿತಿಗಳು, ಉಡುಪಿ ತಾಲೂಕು ಸಾಹಿತ್ಯ ಸಮ್ಮೇಳನದ (2023) ಸರ್ವಾಧ್ಯಕ್ಷರು ಶುಭಾಶಯದ ಮಾತುಗಳನ್ನು ಹೀಗೆ ತಿಳಿಸುತ್ತಾರೆ – ಭಗವಂತನ ಸೇವಾ ರೂಪವಾಗಿ ಜ್ಯೋತಿಷ್ಯ, ವೈದ್ಯಕೀಯ, ಸಾಮಾಜಿಕ ಸೇವಾಕಾರ್ಯಗಳಲ್ಲಿ ಪರಂಪರೆಯಿಂದ ತೊಡಗಿಸಿಕೊಂಡ ಎಲ್ಲೂರಿನ ಪ್ರಸಿದ್ಧ ದಿ। ಲಕ್ಷ್ಮೀನಾರಾಯಣ ಜ್ಯೋತಿಷ್ಕರ ಕುಟುಂಬಕ್ಕೆ ಸೇರಿದ ಡಾಕ್ಟರ್ ಸುದರ್ಶನ್ ರಾಯರೂ ಈ ಕಾಲದಲ್ಲಿ ಅದಕ್ಕನುಗುಣವಾಗಿ ವೈದ್ಯಕೀಯ ಸಾಮಾಜಿಕ ಸಾಂಸ್ಕೃತಿಕ ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಅದು ನಮ್ಮಂತಹ ಹಿರಿಯರ ಪಾಲಿಗೆ ಬಹು ಸಂತೋಷವನ್ನು ನೀಡುವ ವಿಚಾರ. ಈ ಹೊತ್ತಗೆ ಎಲ್ಲರ ಕೈಗೂ, ಎಲ್ಲರ ತಿಳುವಿಗೂ ಬರಲಿ, ಪುಸ್ತಕದ ಅರ್ಥ ಮಸ್ತಕಗತವಾಗಲಿ, ಲೋಕಕ್ಕೆ ಸುಭಿಕ್ಷವಾಗಲಿ, ಲೋಕದಲ್ಲಿ ಶಾಂತಿ ನೆಲೆಸಲಿ ಎಂಬ ಶುಭಾಶಯದ ಮಾತುಗಳೊಂದಿಗೆ ವಿರಮಿಸುತ್ತೇನೆ.

**ಶೃತಿ ಸ್ಮೃತಿ ಪುರಾಣಾನಾಂ ಆಲಯಂ ಕರುಣಾಲಯಂ**
**ನಮಾಮಿ ಭಗವತ್ಪಾದ ಶಂಕರಂ ಲೋಕ ಶಂಕರಂ**

**(ತಾತ್ಪರ್ಯ : ಶೃತಿ ಸ್ಮೃತಿ ಪುರಾಣಗಳೆಂಬ ಜ್ಞಾನದ ಆಶ್ರಯಗಳಾಗಿರುವ, ಈ ಸಮಸ್ತ ಲೋಕಕ್ಕೆ ಹಿತವನ್ನು ಉಂಟು ಮಾಡುತ್ತಿರುವ ಕರುಣಾಮಯರಾದ ಜಗದ್ಗುರು ಶಂಕರರಿಗೆ ನಮಿಸುತ್ತೇನೆ)**

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

**ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ , ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿ ರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್ , ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ , ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್ , ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಎ. ರಾಘವೇಂದ್ರ ರಾವ್ ಮೈಸೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು , ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರ ರಾವ್ ಉಡುಪಿ, ಕೃಷ್ಣಕುಮಾರ್ ರಾವ್ ಮಟ್ಟು , ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್ ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು, ಶ್ರೀ ತಂತ್ರಾಡಿ ಶಿವರಾಮ ಶ್ಯಾನುಭಾಗ್, ಶ್ರೀಮತಿ ಟಿ.ಹರಿಣಿ, ಶ್ರೀ ಪಿ.ಬಾಲಕೃಷ್ಣ ಬೆಂಗಳೂರು, ಎನ್.ಪದ್ಮನಾಭ ರಾವ್ ಬೆಂಗಳೂರು, ಶ್ರೀ ವಸಂತ ಕೇದಿಗೆ ಮಂಗಳೂರು, ಶ್ರೀ ಪಿ. ಪ್ರಭಾಕರ ಭಂಡಿ**

# ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

## 2023-24ನೇ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಸಮಾಜದ ಹೆತ್ತವರು/ಪೋಷಕರು ಮೇಲಿನ ಸಂಘದ ಸದಸ್ಯರಾಗಿದ್ದು ಅವರ ಮಕ್ಕಳು ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್, ಬಿ.ಎಡ್, ಡಿಪ್ಲೊಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿದ್ದು, ಹೆತ್ತವರ ವಾರ್ಷಿಕ ಆದಾಯವು ರೂ.3,00,000/-ಕ್ಕೆ ಮೀರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸಂಘದ ವಿದ್ಯಾರ್ಥಿ ವೇತನ ಅರ್ಜಿ ಫಾರಂ(ಶ್ರೀ ಶಾರದಾ ಮಂಟಪದಲ್ಲಿ ಲಭ್ಯವಿದೆ)ನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿಗೊಳಿಸಿ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿಯೊಂದಿಗೆ ದಿನಾಂಕ 30.09.2023 ರೊಳಗೆ ಶ್ರೀ ಶಾರದಾ ಮಂಟಪಕ್ಕೆ ತಲುಪಿಸಬೇಕು. **- ಅಧ್ಯಕ್ಷರು, ವಿದ್ಯಾರ್ಥಿವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಡಾ| ದಯಾನಂದ ಎಸ್.ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**2023-2024**

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿ ವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿ ವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. **2023-2024**ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ** ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿ ವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು **ಕೈಬರಹದಲ್ಲಿ ಅರ್ಜಿ ಫಾರಂ ಬರೆದು ಪೋಷಕರ ಸಹಿಯೊಂದಿಗೆ,** ಪರೀಕ್ಷೆಯ ಅಂಕಪಟ್ಟಿ ಹಾಗೂ ವ್ಯಾಸಂಗ ಪ್ರಮಾಣ ಪತ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ **ತಾ.30-09-2023**ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳೂ ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ಫೋನ್ : 0820-2522408)ಯಲ್ಲಿ ವಿಚಾರಿಸಬಹುದು.**

**-ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ 2023-2024

**ಉಡುಪಿ ಮತ್ತು ದ.ಕ. ಜಿಲ್ಲೆಗಳ** ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ ಎಲ್ಲಾ ವಿಷಯಗಳಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ **ತಾ.30-09-2023**ರೊಳಗೆ **ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ** ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**- ಅಧ್ಯಕ್ಷರು, ವಿದ್ಯಾರ್ಥಿ ವೇತನ, ಶಿಕ್ಷಣ ಮತ್ತು ತರಬೇತಿ ವೇದಿಕೆ,**

## ಉದಯಚಂದ್ರ ಪ್ರತಿಭಾ ಪುರಸ್ಕಾರ 2023-2024

ಸಂಘದ ಯುವವೇದಿಕೆಯ ಆಶ್ರಯದಲ್ಲಿ **ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ** ನಮ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರ ನೀಡಲಾಗುವುದು. **2022-23ನೇ** ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪದವಿಪೂರ್ವ ಮೂರು ವಿಭಾಗಗಳಲ್ಲಿ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಒಬ್ಬೊಬ್ಬ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ಪ್ರತಿ, ವಿಳಾಸ, ಫೋನ್ ನಂಬ್ರ, ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಅರ್ಜಿಯನ್ನು **ಅಧ್ಯಕ್ಷರು, ಯುವವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು ಉಡುಪಿ - 576 102** ಇಲ್ಲಿಗೆ **ತಾ.30-09-2023**ರೊಳಗೆ ಕಳುಹಿಸಿ ಕೊಡಬೇಕು.

**- ಅಧ್ಯಕ್ಷರು, ಯುವ ಮತ್ತು ಕ್ರೀಡಾ ವೇದಿಕೆ.**

# ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ **2023-24**ನೇ ಸಾಲಿನ **ದಿ| ಡಾ| ವೈ. ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿ ವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ| ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿ ವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ **ದಿನಾಂಕ 30-11-2023**. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನ ರಾವ್,**

**ಇಂಚರ ಸರ್ಜಿಕಲ್ ಕ್ಲಿನಿಕ್. ಎ.ಜೆ.ಅಲ್ಸೆ ರಸ್ತೆ, ಪ್ರಸಾದ ನೇತ್ರಾಲಯದ ಎದುರು, ಉಡುಪಿ-576101**

# ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ

**ಕೋಂ.ಕೆ. ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ-575019. ಮೊ : 8762235801.**

## ಪ್ರತಿಭಾ ಪುರಸ್ಕಾರ

2022-23ರ ಸಾಲಿನ ಶೈಕ್ಷಣಿಕ ವರ್ಷದ ಪ್ರೌಢಶಾಲಾ (ಎಸ್.ಎಸ್.ಎಲ್.ಸಿ.) ಮತ್ತು ಪದವಿ ಪೂರ್ವ ಶಿಕ್ಷಣದ ಅಂತಿಮ ಪರೀಕ್ಷೆಯಲ್ಲಿ (ಪಿ.ಯು.ಸಿ.) ವಿಶಿಷ್ಟ ಶ್ರೇಣಿಯಲ್ಲಿ (85% ಅಧಿಕ) ತೇರ್ಗಡೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈರಸ್ತೆ, ಕರಂಗಲ್ಪಾಡಿ, ಮಂಗಳೂರು-4 ಇಲ್ಲಿ ತಾ.29.10.2023ರಂದು ದಸರಾ ಪ್ರಯುಕ್ತ ನಡೆಯುವ ನಾಡಹಬ್ಬದಂದು ಪ್ರತಿಷ್ಠಾನದ ವತಿಯಿಂದ ಅಭಿನಂದಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲಾ ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ಅಂಕ ಪಟ್ಟಿಯ ಯಥಾ ನಕಲು, ವಿಳಾಸ, ದೂರವಾಣಿ ಸಂಖ್ಯೆ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿಗಳನ್ನು **ತಾ.30.09.2023**ರ ಒಳಗಾಗಿ ಮೇಲ್ಕಾಣಿಸಿದ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

**-ಕೆ. ಸದಾಶಿವ ಶಾಸ್ತ್ರೀ, 8762235801**


**Buying and selling shares as easy as checking your emails**


**Sharekhan Online Trading Account Features:**
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com






# RAJESH POWER PRESS

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**



Ph : 98459 92859

**Ganesh Hebbar & Associates**
CHARTERED ACCOUNTANT
S.M.S.P. Complex, Udupi - 576 101.





**ಕೆ. ದಿನಮಣಿ ಶಾಸ್ತ್ರೀ** ಮೊಬೈಲ್ : 8277190632, 9482284970





**ಚಿತ್ತಾರ ಫೋಟೋ ಆರ್ಟ್**

ಶುಭ ಸಮಾರಂಭಗಳ ಛಾಯಾಚಿತ್ರ ಮತ್ತು ವಿಡಿಯೋಗಾಗಿ ಕರೆಮಾಡಿ

ಚಿತ್ತಾರ, 3/96, ನವೋದಯನಗರ, ಚಾಂತಾರು, ಅಗ್ರಹಾರ, ಬ್ರಹ್ಮಾವರ-576213.



*With Best Complimemts From*

**SRI M. SHAILESH RAO** Ph : 9448624324
B.E., Civil
**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**

## ನಿಧನ



ಶ್ರೀ ಪ್ರವೀಣ್‌ಚಂದ್ರ ಶರ್ಮಾ ಅವರ ತಾಯಿ ಶ್ರೀಮತಿ ಜಾನಕಿ ಶರ್ಮಾ ಅವರು ತಮ್ಮ 77ನೇ ವಯಸ್ಸಿನಲ್ಲಿ ತಾ.10.07.2023 ರಂದು ನಿಧನರಾದರು.

**** ****



ಡಾ। ವಿದ್ಯಾಸಾಗರ್ ರಾವ್ ಅವರು ತಮ್ಮ 84ನೇ ವಯಸ್ಸಿನಲ್ಲಿ ತಾ.13.07.2023 ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



ಡಾ। ಟಿ. ರಾಧಾಕೃಷ್ಣ ರಾವ್ (ಬಿಜೈ ಡಾಕ್ಟರ್) ಅವರ ಪತ್ನಿ ಶ್ರೀಮತಿ ಅನ್ನಪೂರ್ಣ ಅವರು ತಮ್ಮ 72ನೇ ವಯಸ್ಸಿನಲ್ಲಿ ತಾ.14.07.2023 ರಂದು ಮಂಗಳೂರಿನಲ್ಲಿ ನಿಧನರಾದರು. ಅವರು ಪತಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

**** ****



ಶ್ರೀ ಉಳ್ಳೂರು ವಾಸುದೇವ ರಾವ್ ಅವರು ತಮ್ಮ 74ನೇ ವಯಸ್ಸಿನಲ್ಲಿ ತಾ.16.07.2023 ರಂದು ಉಡುಪಿಯಲ್ಲಿ ನಿಧನರಾದರು. ಅವರು ಮೂರು ಮಕ್ಕಳು ಹಾಗೂ ಐದು ಮೊಮ್ಮಕ್ಕಳನ್ನು ಅಗಲಿದ್ದಾರೆ.

**** ****



ಬೈಂದೂರು ನಿವಾಸಿಯಾದ ಶ್ರೀ ನಾಗರಾಜ್ ರಾವ್ ಅವರು ತಮ್ಮ 78ನೇ ವಯಸ್ಸಿನಲ್ಲಿ (ನಿವೃತ್ತ ಶಿಕ್ಷಕರು, ಯೋಗ ಶಿಕ್ಷಕರು ಹಾಗೂ ಸೇವಾಸಂಗಮ ಶಿಶುಮಂದಿರದ ಸಮಿತಿಯ ಸದಸ್ಯರಾಗಿದ್ದರು.) ತಾ.17.07.2023ರಂದು ನಿಧನರಾದರು. ಅವರು ಮೂವರು ಪುತ್ರಿಯರು ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ.

**** ****



ಡಾ। ಸದಾಶಿವ ಶರ್ಮಾ ಅವರ ಪತ್ನಿ ಶ್ರೀಮತಿ ಕೆ. ಸ್ವರ್ಣಲತಾ ಶರ್ಮಾ ಅವರು ತಮ್ಮ 83ನೇ ವಯಸ್ಸಿನಲ್ಲಿ ತಾ.19.07.2023 ರಂದು ಬೆಂಗಳೂರಿನ ಯಲಹಂಕದಲ್ಲಿ ನಿಧನರಾದರು. ಅವರು ಒಬ್ಬಳು ಪುತ್ರಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

**** ****



ಶ್ರೀ ಸುಬ್ರಹ್ಮಣ್ಯ ರಾವ್ ಅವರ ಪತ್ನಿ (ಶ್ರೀ ಮಂಜುನಾಥೇಶ್ವರ ದೇವಸ್ಥಾನದ ಪಾತಾಳಿ) ಮತ್ತು ಧರ್ಮಸ್ಥಳದ ಮಂಜುಶ್ರೀ ನಗರದ ನಿವಾಸಿ ಶ್ರೀಮತಿ ರಂಜಿತಾ ಅವರು ತಮ್ಮ 57ನೇ ವಯಸ್ಸಿನಲ್ಲಿ ತಾ.21.07.2023ರಂದು ನಿಧನರಾದರು. ಅವರು ಪತಿ ಮತ್ತು ಒಬ್ಬ ಮಗಳನ್ನು ಅಗಲಿದ್ದಾರೆ.

**** ****




ಡಾ। ಪಿಳಿಂಜೆ ಶಶಿಶೇಖರ್ ರಾವ್ ಅವರು ತಮ್ಮ 77ನೇ ವಯಸ್ಸಿನಲ್ಲಿ ತಾ.22.07.2023 ರಂದು ಮುಂಬೈನಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಮೂಡಿಗೆರೆಯ ಶ್ರೀ ಕೇದಿಗೆ ಅನಂತೇಶ (ಶ್ರೀ ಕೇದಿಗೆ ಶಾಂತಾರಾಮ ರಾವ್ ಮತ್ತು ಶ್ರೀಮತಿ ಶಾರದಾ ಅವರ ಪುತ್ರ) ಅವರು ತಮ್ಮ 66ನೇ ವಯಸ್ಸಿನಲ್ಲಿ ತಾ.31.07.2023 ರಂದು ನಿಧನರಾದರು. ಅವರು ಪತ್ನಿ ಶ್ರೀಮತಿ ನಳಿನಿ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

**** ****



ಶ್ರೀ ಪಾದೆಬೆಟ್ಟು ಶ್ರೀಕರ್ ರಾವ್ ಅವರು ತಮ್ಮ 79ನೇ ವಯಸ್ಸಿನಲ್ಲಿ ತಾ.04.08.2023 ರಂದು ಕುಲಶೇಖರ್, ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

**** ****



ಪಿ ಭಾಸ್ಕರ ರಾವ್ (81 ವರ್ಷ) ನಿವೃತ್ತ ಕೋರ್ಟ್ ಉದ್ಯೋಗಿ ತಾ.19.07.2023ರಂದು ನಿಧನರಾದರು. ಇವರು ಪತ್ನಿ ಶೋಭಾ ಬಿ.ರಾವ್ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.






## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 4-00ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ: **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-00ರಿಂದ

**ತಾ.03-09-2023 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.100/-)**

**ತಾ.26-08-2023 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.21-08-2023 ಮತ್ತು ತಾ.04-09-2023 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಸಿಂಹ ಮಾಸದ ವಿಶೇಷ ದಿನಗಳು

| | | | |
|---|---|---|---|
| 16.08.2023 | ಆಟಿ ಅಮಾವಾಸ್ಯೆ ಅಧಿಕ ಮಾಸದ ಮುಕ್ತಾಯ | 01.09.2023 | ವರ್ಷ ಋತು ನಿಜ ಶ್ರಾವಣ ಮಾಸದ ಕೃಷ್ಣ ಪಕ್ಷಾರಂಭ |
| 17.08.2023 | ವರ್ಷ ಋತು ನಿಜ ಶ್ರಾವಣ ಮಾಸದ ಶುಕ್ಲಪಕ್ಷಾರಂಭ ಸಿಂಹ ಸಂಕ್ರಮಣ | 03.09.2023 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.23 |
| | | 06.09.2023 | ಶ್ರೀ ಕೃಷ್ಣ ಜನ್ಮಾಷ್ಟಮಿ ಚಂದ್ರೋದಯ ರಾತ್ರಿ 11.42 |
| 19.08.2023 | ಶುಕ್ರೋದಯ | | |
| 21.08.2023 | ನಾಗರ ಪಂಚಮಿ | 07.09.2023 | ಶ್ರೀಕೃಷ್ಣ ಲೀಲೋತ್ಸವ, ವಿಟ್ಲಪಿಂಡಿ |
| 22.08.2023 | ಮಂಗಳಗೌರಿ ವ್ರತ | 10.09.2023 | ಸರ್ವೈಕಾದಶಿ |
| 25.08.2023 | ವರಮಹಾಲಕ್ಷ್ಮೀ ವ್ರತ | 15.09.2023 | ಅಮಾವಾಸ್ಯೆ |
| 27.08.2023 | ಸರ್ವೈಕಾದಶಿ | 16.09.2023 | ವರ್ಷಋತು ಭಾದ್ರಪದ ಮಾಸದ ಶುಕ್ಲಪಕ್ಷಾರಂಭ, ಸಾಮೋಪಾಕರ್ಮ |
| 29.08.2023 | ಋಗುಪಾಕರ್ಮ | | |
| 30.08.2023 | ಯಜುರ್ಪಾಕರ್ಮ, ರಕ್ಷಾಬಂಧನ | | |
| 31.08.2023 | ಹುಣ್ಣಿಮೆ | 17.09.2023 | ಕನ್ಯಾ ಸಂಕ್ರಮಣ |

## 'ಆಟಿಯ ಆಟ–ಕೂಟ–ಊಟ'

■...1ನೇ ಪುಟದಿಂದ

ಈ ಸಲದ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸಿದ್ದರು. ಸಂಘದ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಬಂಧು ಬಾಂಧವರೆಲ್ಲರೂ ಒಟ್ಟಾಗಿ 'ಆಟ' ಆಡಲು ಬೇಕಾದ ಪೂರ್ವ ಸಿದ್ಧತೆ ಮತ್ತು ಭೋಜನದ ವ್ಯವಸ್ಥೆಗಳಲ್ಲಿ ಸಹಕರಿಸಿದರು.

'ಸ್ಪಂದನ' ವಾಹಿನಿಯ ಉದ್ಘೋಷಕ ರಾಗಿರುವ ಶ್ರೀ ನಾಗರಾಜ ರಾವ್ ವಕ್ವಾಡಿ ಮತ್ತು ನಾರಾವಿ ಸರ್ಕಾರಿ ಪ್ರೌಢಶಾಲೆಯ ದೈಹಿಕ ಶಿಕ್ಷಕರಾಗಿರುವ ಶ್ರೀ ಕೋದಂಡ ರಾಮ ರಾವ್‌ರವರು ತೀರ್ಪುಗಾರರಾಗಿ ಆಗಮಿಸಿದ್ದರು.

ಸಂಘದ ಕಾರ್ಯದರ್ಶಿ ಶ್ರೀ ಪ್ರಭಾಕರ ಭಂಡಿಯವರು ಎಲ್ಲರನ್ನೂ ಸ್ವಾಗತಿಸುತ್ತಾ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಕ್ಯಾರಂ ಮತ್ತು ಚೆಸ್ ಆಡಲು ಸ್ಪರ್ಧಾಳುಗಳ ಸಂಖ್ಯೆ ಹೆಚ್ಚಾಗಿದ್ದರಿಂದ ತೀರ್ಪುಗಾರರು ಕೆಲವು ನಿಬಂಧನೆಗಳೊಂದಿಗೆ ಆಟಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಕ್ಯಾರಂ ಡಬಲ್ಸ್‌ಗೆ 24 ತಂಡಗಳು, ಚೆಸ್ ಸ್ಪರ್ಧೆಗೆ 18 ಮಂದಿ ಆಟಗಾರರು ಹೆಸರು ನೋಂದಾಯಿಸಿದ್ದರು.

ವಿಜೇತರು : 1. ಕ್ಯಾರಂ – ಪ್ರಥಮ : ಶರತ್ ರಾವ್ ಹಾಗೂ ಆಶಿಕ್, ದ್ವಿತೀಯ : ಪ್ರಕಾಶ್ ರಾವ್ ಹಾಗೂ ಪ್ರಿಯಾ ರಾವ್ 2. ಚೆಸ್–ಪ್ರಥಮ : ಅವ್ಯಕ್ತ್ ರಾವ್ ದ್ವಿತೀಯ : ಡಾ। ಎಂ. ಶಾಮರಾವ್

ಸ್ಪರ್ಧೆಯಲ್ಲಿ ಭಾಗವಹಿಸದ ಕ್ಯಾರಂ ಮತ್ತು ಚೆಸ್ ಆಡಲು ಅವಕಾಶವಿತ್ತು. ಇನ್ನೊಂದೆಡೆ ಮಕ್ಕಳು, ಮಹಿಳೆಯರು ಮತ್ತು ಆಸಕ್ತರು ಚೆನ್ನಮಣೆ, ಲೂಡೊ ಮುಂತಾದ ಆಟಗಳನ್ನು ಆಡುತ್ತಾ ಸಂಭ್ರಮಿಸಿದರು. ಶ್ರೀ ಶಾರದಾ ದೇವಸ್ಥಾನದ ಮುಂಭಾಗದಲ್ಲಿ ಚಿಣ್ಣರು ಲಗೋರಿ ಆಡುತ್ತಾ ಖುಷಿ ಪಟ್ಟರು. ಸಂಜೆ ಹಲಸಿನ ಹಪ್ಪಳ, ಅವಲಕ್ಕಿ ಮತ್ತು ಕಷಾಯದ ವ್ಯವಸ್ಥೆ ಮಾಡಲಾಗಿತ್ತು.

ಆಟಿಯ ಆಟಗಳನ್ನಾಡಿ ಮುದಗೊಂಡ ಬಾಂಧವರು, ಸ್ವಾದಿಷ್ಟ ಹಲಸಿನ ಮುಳ್ಕ, ಶ್ಯಾಮಿಗೆ ಹಾಲು, ಪತ್ರೊಡೆ ಒಗ್ಗರಣೆ, ಹಾಲ್ಬಾಯಿ, ಅರಶಿನ ಎಲೆಯ ಸಿಹಿಗಡುಬು, ಹುರುಳಿ ಪಲ್ಯ, ಮುಳ್ಳುಸೌತೆ ಮೂಡೆ, ಕೆಸುದಂಟಿನ ಬೋಳ್ಕೊದ್ದೆಲು, ಪಾಯಸ ಮುಂತಾದ ಆಟಿಯ ವಿಶೇಷ ಭಕ್ಷ್ಯಗಳನ್ನು ಸವಿದರು.

ಸ್ಪರ್ಧೆಗಳ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಘದ ಮಾಜಿ ಉಪಾಧ್ಯಕ್ಷರಾದ ಎಸ್.ಎಮ್.ರಾವ್ ಹಾಗೂ ಪೂರ್ವಾಧ್ಯಕ್ಷ ರಾದ ವೈ.ಭುವನೇಂದ್ರ ರಾವ್, ಡಾ.ವಿದ್ಯಾ ರಾವ್ ಉಪಸ್ಥಿತರಿದ್ದರು.

ಈ ಅದ್ದೂರಿಯ 'ಕೂಟ'ದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್, ಕೋಶಾಧಿಕಾರಿ ಶ್ರೀ ಗಣೇಶ್ ಹೆಬ್ಬಾರ್, ಉಪಾಧ್ಯಕ್ಷರಾದ ಶ್ರೀ ಅರವಿಂದ ರಾವ್, ಜೊತೆ ಕಾರ್ಯದರ್ಶಿ ಶ್ರೀ ವಿನೋದ್ ಕುಮಾರ್, ಸಲಹೆಗಾರರಾದ ಶ್ರೀ ಸಿ.ಎಸ್. ರಾವ್, ನಿರ್ದೇಶಕರು, ಪೂರ್ವಾಧ್ಯಕ್ಷರು ಗಳು, ಸದಸ್ಯರು, ಹಿರಿಯರು, ಕಿರಿಯರು ಭಾಗವಹಿಸಿದ್ದರು. ಈ ಕಾರ್ಯಕ್ರಮಕ್ಕೆ ತನು, ಮನ, ಧನಗಳಿಂದ ಸಹಕರಿಸಿದ ಎಲ್ಲರಿಗೂ ವಂದನೆಗಳು.

## ಸಂತೋಷ್ ಅನಂತಪುರ ರವರಿಗೆ ಪ್ರಶಸ್ತಿ

■...2ನೇ ಪುಟದಿಂದ

ಸಂತೋಷ್ ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಕೇರಳ ರಾಜ್ಯದ, ಕಾಸರಗೋಡು ಜಿಲ್ಲೆಯ ಕುಂಬಳೆಯಲ್ಲಿ ಪೂರೈಸಿ, ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಪತ್ರಿಕೋದ್ಯಮದಲ್ಲಿ ಪದವಿಯನ್ನೂ, ಮಂಗಳೂರು ವಿ.ವಿ.ಯಲ್ಲಿ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯನ್ನೂ ಗಳಿಸಿರುತ್ತಾರೆ.

ಪ್ರಾಥಮಿಕ-ಪ್ರೌಢಶಿಕ್ಷಣದ ಅವಧಿಯಲ್ಲಿ ಆಲೆಪ್ಪಿಯಲ್ಲಿ ನಡೆದ ಕೇರಳ ರಾಜ್ಯಮಟ್ಟದ ವಿಜ್ಞಾನ ಮೇಳದಲ್ಲಿ ಎರಡನೇ ಸ್ಥಾನವನ್ನು ಪಡೆದ ಅಪ್ಪಟ ಪ್ರತಿಭೆ ಇವರದ್ದು. ಅಷ್ಟು ಮಾತ್ರವಲ್ಲ ತಮ್ಮ ನಾಯಕತ್ವದಲ್ಲಿ ತಾಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ಕುಂಬಳೆಯ ಹೋಲಿ ಫ್ಯಾಮಿಲಿ ಹಿರಿಯ ಬುನಾದಿ ಶಾಲೆಯನ್ನು ಪ್ರತಿನಿಧಿಸಿದ್ದಲ್ಲದೆ-ಸಾಂಸ್ಕೃತಿಕ, ಕ್ರೀಡೆ, ವಿಜ್ಞಾನ ಮೇಳಗಳಲ್ಲಿ ತಂಡವನ್ನು ಮುನ್ನಡೆಸಿ, ಶಾಲೆಯ ಚರಿತ್ರೆಯಲ್ಲಿ ಮಹತ್ತರವಾದ ಮೈಲುಗಲ್ಲನ್ನು ಸ್ಥಾಪಿಸಿದವರು.

ಚೆನ್ನೈಯಲ್ಲಿ ನಡೆದ ದಕ್ಷಿಣ ಭಾರತ ವಿ.ವಿ. ಮಟ್ಟದ ಸಾಂಸ್ಕೃತಿಕ ಮೇಳದಲ್ಲಿ ‘ಸುಗಮ ಸಂಗೀತ’ ಕ್ಷೇತ್ರದಲ್ಲಿ ಮಂಗಳೂರು ವಿ.ವಿ.ಯನ್ನು ಪ್ರತಿನಿಧಿಸಿ, ಮೂರನೇ ಬಹುಮಾನ ಪಡೆದ ಹೆಗ್ಗಳಿಕೆ. ಸ್ನಾತಕೋತ್ತರ ಪದವಿಯ ದಿನಗಳಲ್ಲೂ ಅನೇಕ ಬಹುಮಾನಗಳನ್ನು ತಮ್ಮಿಷ್ಟದ ಕ್ಷೇತ್ರದಲ್ಲಿ ಭಾಗವಹಿಸಿ ಪಡೆದುಕೊಂಡಿರುತ್ತಾರೆ. ವಿ.ವಿ. ಮಟ್ಟದ ವಿನಿಮಯ ಕಾರ್ಯಕ್ರಮದಡಿಯಲ್ಲಿ ನೇಪಾಳದ ‘ಕಾಟ್ಮಂಡು’ ವಿ.ವಿ.ಗೆ ಭೇಟಿಯನ್ನು ನೀಡಿರುತ್ತಾರೆ. ‘ಅಮೆರಿಕಾ’ ಹಾಗೂ ‘ನೊರ್ವೆ’ ವಿ.ವಿ.ಯ ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ‘ಭೂತಕೋಲ’ ಡಾಕ್ಯುಮೆಂಟರಿಯನ್ನೂ ಸ್ನಾತಕೋತ್ತರ ಪದವಿಯ ದಿನಗಳಲ್ಲಿ ನಿರ್ಮಿಸಿರುತ್ತಾರೆ. ‘ದೂರದರ್ಶನ’ ಹಾಗೂ ‘ಪ್ರಜಾವಾಣಿ’ಯಲ್ಲಿ ಇಂಟರ್ಶಿಪ್ ಅನ್ನೂ ಪೂರೈಸಿರುತ್ತಾರೆ. ಉದ್ಯೋಗ ನಿಮಿತ್ತ ಸಾರ್ಕ್-ಮಿಡ್ಲ್ ಈಸ್ಟ್-ಆಫ್ರಿಕನ್ ದೇಶಗಳಿಗೆ ಭೇಟಿ ನೀಡಿರುತ್ತಾರೆ. ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಮತ್ತು ಕಾರ್ಪೊರೇಟ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದವರು-ಪ್ರಸ್ತುತ ಇನ್ಫೋಸಿಸ್ ಲಿಮಿಟೆಡ್, ಬೆಂಗಳೂರಿನಲ್ಲಿ ‘ಕಾರ್ಪೊರೇಟ್ ಅಫೇರ್ಸ್-ಮುಖ್ಯಸ್ಥ’ (Head-Corporate Affairs)ರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಉದ್ಯೋಗದಲ್ಲಿ ನಿರ್ವಹಿಸಿದ ಕಾರ್ಯಕ್ಷಮತೆಯನ್ನು ಗುರುತಿಸಿ ‘ಸೋಶಿಯಲ್ ಅಂಡ್ ಸಸ್ಟೈನೆಬಿಲಿಟಿ’ ಅಡಿಯಲ್ಲಿ ‘ಇನ್ಫಿ ಆಸ್ಕರ್’ ಎಂದೇ ಕರೆಯಲ್ಪಡುವ ‘ಅವಾರ್ಡ್ ಫಾರ್ ಎಕ್ಸೆಲೆನ್ಸ್-ಗೋಲ್ಡ್ 2021-22’ ಗ್ಲೋಬಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನವಕರ್ನಾಟಕ ಪ್ರಕಾಶನ ಬೆಂಗಳೂರು, ಇವರ ‘ಸವಾರಿ ಗಿರಿ..ಗಿರಿ..’ ಪ್ರವಾಸ ಕಥನವನ್ನು ಮತ್ತು ‘ಕಾಗೆ ಮತ್ತು ಕಡ್ಲೆಬೇಳೆ ಪಾಯಸ’ ಕಥಾ ಸಂಕಲನವನ್ನು ಪ್ರಕಟಿಸಿರುತ್ತಾರೆ. ಈ ಎರಡೂ ಕೃತಿಗಳು ‘ಮೈ ಲಾಂಗ್, ವಿವಿಡ್ ಲಿಪಿ ಮತ್ತು ಋತುಮಾನ ಆಪ್’ಗಳಲ್ಲಿ ಇ-ಬುಕ್ ಆಗಿಯೂ ಹೊರ ಹೊಮ್ಮಿದ್ದಲ್ಲದೆ, ‘ಸ್ಟೋರಿ ಟೆಲ್ ಆಪ್’ನಲ್ಲಿ ಆಡಿಯೋ ಪುಸ್ತಕವಾಗಿಯೂ ಲಭ್ಯವಿವೆ. ‘ವಸಂತ ಪ್ರಕಾಶನ’ ಬೆಂಗಳೂರು, ಇವರು ಬರೆದ ‘ಜಿಡ್ಡು ಕೃಷ್ಣಮೂರ್ತಿ’ ವ್ಯಕ್ತಿ ಪರಿಚಯ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ನಾಡಿನ ಪ್ರಮುಖ ಪತ್ರಿಕೆಗಳಲ್ಲಿ, ವೆಬ್ ಪೋರ್ಟಲ್‌ಗಳಲ್ಲಿ ಇವರ ಲೇಖನ, ಪ್ರವಾಸ ಕಥನ, ಕತೆಗಳು ಪ್ರಕಟಗೊಂಡಿವೆ, ಪ್ರಕಟಗೊಳ್ಳುತ್ತಲೇ ಇವೆ.

ತಮ್ಮ ಎರಡನೇ ಕಥಾ ಸಂಕಲನ ‘ತೃಷೆ’ಯನ್ನು ಹೊರತರುವ ಯೋಜನೆಯಲ್ಲಿರುವ ಇವರು, ತಮ್ಮ ಗಂಭೀರ ಚಿಂತನಾ ಲೇಖನಗಳ ಗುಚ್ಛ ‘ಆಳ ನೀಳ’ ವನ್ನೂ ಆದಷ್ಟು ಬೇಗನೆ ಓದುಗರ ಕೈಗೆ ನೀಡಲಿದ್ದಾರೆ. ಮಾತ್ರವಲ್ಲ ‘ಕಾಗೆ ಮತ್ತು ಕಡ್ಲೆಬೇಳೆ ಪಾಯಸ’ ಸಂಕಲನದಲ್ಲಿರುವ ‘ಚೆಂಡೆ’ ಕಥೆಯು ಮಂಗಳೂರು ವಿಶ್ವವಿದ್ಯಾಲಯದ ಪಠ್ಯಪುಸ್ತಕ ಸಮಿತಿಯಿಂದ ಸ್ವೀಕಾರಗೊಂಡು, ನಾಲ್ಕನೇ ಸೆಮಿಸ್ಟರ್ ಬಿ.ಸಿ.ಎ ವಿದ್ಯಾರ್ಥಿಗಳಿಗೆ ಪಾಠವಾಗಲಿದೆ. ಇದೇ ಕಥಾ ಸಂಕಲನವು ಮಲೆಯಾಳಮ್ ಓದುಗರಿಗೂ ಶೀಘ್ರದಲ್ಲಿ ದೊರೆಯಲಿದೆ. ಪ್ರಸ್ತುತದ ಶ್ರೇಷ್ಠ ಭಾಷಾಂತರಗಾರ (ಕನ್ನಡದಿಂದ ಮಲೆಯಾಳಕ್ಕೆ) ಶ್ರೀ ಸುಧಾಕರನ್ ರಾಮನ್ ತಳ್ಳಿ ಅವರು ‘ಕಾಗೆ ಮತ್ತು ಕಡ್ಲೆಬೇಳೆ ಪಾಯಸ’ ವನ್ನು ಮಲೆಯಾಳಕ್ಕೆ ಭಾಷಾಂತರಿಸಿದ್ದಾರೆ. ಇತ್ತೀಚೆಗೆ ರಾಜ್ಯ ಮಟ್ಟದ ‘ಉತ್ಥಾನ’ ಕಥಾ ಸ್ಪರ್ಧೆಯಲ್ಲಿ ಮೂರನೇ ಬಹುಮಾನವನ್ನೂ ಗಳಿಸಿರುತ್ತಾರೆ.

ಬೆಂಗಳೂರಿನಲ್ಲಿ ಇವರು ವಾಸಿಸುವ ಪ್ರದೇಶದ ಸಮೀಪವಿದ್ದ 24 ಎಕರೆಯ ವಿಶಾಲ ಆಲಹಳ್ಳಿ ಕೆರೆಯ ಪುನರುಜ್ಜೀವನವನ್ನು ಕರ್ನಾಟಕ ಸರ್ಕಾರದ ಬಳಿ ಮಾತನಾಡಿ 8 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿಸಿ, ಕೆರೆಗೆ ಹಿರಿಮೆ ತಂದ ಗರಿಮೆ ಇವರದ್ದು. ತನ್ನ ಹುಟ್ಟೂರಿನ ಅಭಿಮಾನಕ್ಕೆ ಶಿರಬಾಗಿ ತಾವು ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯ ಭಾಗವಾಗಿರುವ ‘ಇನ್ಫೋಸಿಸ್ ಪ್ರತಿಷ್ಠಾನ’ದ ಸಂಸ್ಥಾಪಕ ಅಧ್ಯಕ್ಷೆ ಪದ್ಮವಿಭೂಷಣ ಡಾ. ಸುಧಾ ಮೂರ್ತಿ ಅವರಿಂದ ಕಾಸರಗೋಡು ಜಿಲ್ಲೆಯ ಎರಡು ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್-ಕಿಚನ್ ಹಾಗೂ ಡೈನಿಂಗ್ ಹಾಲ್‌ನ ನಿರ್ಮಾಣಕ್ಕೆ ಒಂದು ಕೋಟಿ ರೂ. ಅನುದಾನವನ್ನು ನೀಡುವಲ್ಲಿ ನಿಮಿತ್ತವಾಗಿದ್ದಾರೆ. ಅದೇ ರೀತಿ ಅನಂತಪುರದ ಶ್ರೀ ಅನಂತಪದ್ಮನಾಭಸ್ವಾಮಿ ದೇವಸ್ಥಾನದ ಬಹುಕಾಲದ ಕನಸಾಗಿರುವ ‘ಅನಂತ ಯಾತ್ರಿ ನಿವಾಸ’ದ ಚಾಲನೆಗೂ ಶ್ರೀಯುತರು ಮಾತೃಸ್ವರೂಪಿ ಡಾ. ಸುಧಾಮೂರ್ತಿಯವರಿಂದ ಆಶೀರ್ವಾದ ರೂಪಕವಾಗಿ ರೂ.10,00,000 ಧನ ಸಹಾಯವನ್ನೂ ನೀಡಿಸಿರುತ್ತಾರೆ.

ಇಂತಹ ವ್ಯಕ್ತಿ ಚಿತ್ರಣವುಳ್ಳ ಸಂತೋಷ್ ರವರು ಇನ್ನೂ ಯುವಕರು. ತಮ್ಮ ವೃತ್ತಿ ಜೀವನದ ಒತ್ತಡದ ನಡುವೆಯೂ ಬಹಳಷ್ಟು ಸಾಹಿತ್ಯ ಕೃಷಿಯನ್ನು ಮಾಡಿರುತ್ತಾರೆ. ಅವರ ಬರವಣಿಗೆಯ ಶೈಲಿ, ಭಾಷೆಯ ಮೇಲಿನ ಹಿಡಿತ ನಿಜಕ್ಕೂ ಪ್ರಶಂಸನೀಯ. ಅಂದ ಹಾಗೆ ಸಂತೋಷ್ ಅನಂತಪುರ ಒಬ್ಬ ಉತ್ತಮ ಗಾಯಕ ಮತ್ತು ನಟರೂ ಕೂಡಾ.

ಮಗಳು ದೇವಯಾನಿ ಸಂತೋಷ್-ಕಿರಾನ ಘರಾಣ ಶೈಲಿಯ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತವನ್ನು ಕಲಿಯುತ್ತಿದ್ದಾಳೆ. ಮಾತ್ರವಲ್ಲ ತನ್ನ ಗಾಯನ ಪ್ರತಿಭೆಗೆ ‘ಸಿ.ಸಿ.ಆರ್.ಟಿ’ಯ ಯುವಪ್ರತಿಭಾ ಸ್ಕಾಲರ್ಶಿಪ್’ ಅನ್ನೂ ಪಡೆಯುತ್ತಿದ್ದಾಳೆ. ಜೊತೆಗೆ ‘ಕಥಕ್’ ನೃತ್ಯವನ್ನೂ ಅಭ್ಯಸಿಸುತ್ತಿದ್ದಾಳೆ. ಪತ್ನಿ ಸ್ವಪ್ನಾ- ‘ದ ವ್ಯಾಲಿ ಶಾಲೆ’ಯಲ್ಲಿ ಹಿರಿಯ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

L.No.31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ -576101. ದೂರವಾಣಿ : 2522408

ತಾ. : 24-06-2023

### 2022-2023ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ,

ನಮ್ಮ ಸಂಘದ 2022-2023ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.09.09.2023 ಶನಿವಾರ ಅಪರಾಹ್ನ ಘಂಟೆ 3-30ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡಾವಳಿಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ನಿರ್ಣಯದಂತೆ

ಪಟ್ಟಾಭಿರಾಮ ಎನ್.ಎಸ್
ಕಾರ್ಯದರ್ಶಿ

ಎಂ.ಸದಾನಂದ ರಾವ್
ಅಧ್ಯಕ್ಷರು

#### ಕಾರ್ಯಕ್ರಮ ಸೂಚಿ

1. ಪ್ರಾರ್ಥನೆ
2. ಸ್ವಾಗತ ಭಾಷಣ
3. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
4. ತಾ.17-09-2022ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
5. 2022-2023ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
6. 2022-2023ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ.
7. 2022-2023ನೇ ಸಾಲಿನ ಅಂದಾಜು ಆಯ-ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
8. 2023-2024ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
9. 2022-2023ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
10. 2023-2024ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
11. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.
12. ವಂದನಾರ್ಪಣೆ
13. ರಾಷ್ಟ್ರಗೀತೆ

ವಿ.ಸೂ. :

1. ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶದ ಹಣವನ್ನು ನಿಯಮದಂತೆ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.
3. ಸಹಕಾರ ಕಾಯ್ದೆ ಹಾಗೂ ಸಂಘದ ಉಪನಿಯಮಗಳನ್ವಯ ಸದಸ್ಯರು 5 ಮಹಾಸಭೆಗಳಲ್ಲಿ ಕಡ್ಡಾಯವಾಗಿ 2 ಮಹಾಸಭೆಗಳಿಗೆ ಹಾಜರಾಗಬೇಕು ಮತ್ತು ಸತತ 2 ವರ್ಷಗಳ ಕಾಲ ನಿಗದಿತ ಕನಿಷ್ಠ ವ್ಯವಹಾರವನ್ನು ಮಾಡಬೇಕಾಗಿದ್ದು, ತಪ್ಪಿದಲ್ಲಿ ಅಂತಹ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.
4. ಸಂಘದ ಪ್ರಾಥಮಿಕ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳು ಸಂಘದ ಕಛೇರಿಯಿಂದ ಅರ್ಜಿಯ ಪ್ರತಿಯನ್ನು ಪಡೆದು ತಮ್ಮ ಅಂಕಪಟ್ಟಿಯ ಪ್ರತಿಯನ್ನು ಮತ್ತು ವ್ಯಾಸಂಗ ಮಾಡುತ್ತಿರುವ ಬಗ್ಗೆ ಕಾಲೇಜಿನ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ, ತಮ್ಮ ಪೋಷಕರ ಸದಸ್ಯ ಸಂಖ್ಯೆ ನೋಂದಾಯಿಸಿ ದಿನಾಂಕ 31.08.2023ರೊಳಗಾಗಿ ಸಂಘಕ್ಕೆ ಸಲ್ಲಿಸಬೇಕಾಗಿದ್ದು ದಿನಾಂಕ 09.09.2023ರಂದು ನಡೆಯುವ ವಾರ್ಷಿಕ ಮಹಾಸಭೆಯಲ್ಲಿ ವಿದ್ಯಾರ್ಥಿವೇತನ ವಿತರಿಸಲಾಗುವುದು.

ಸದಸ್ಯರು ಸಭೆಗೆ ಬರುವಾಗ ಈ ನೋಟೀಸನ್ನು / ವರದಿಯನ್ನು ತಪ್ಪದೇ ತರಬೇಕಾಗಿ ವಿನಂತಿ.

PRODUCTS ARE AVAILABLE AT ATTRACTIVE DISCOUNT PRICES




BATTERY PLANET
SALES & SERVICES
Dealers : Inverter, Batteries, Gas Geysers & Solar Water Heaters
Udupi, Padubidri, Contact : 94824 57926, 99455 43051
* Inverter+battery rates starts from Rs. 11,990

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ.: ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಅಭಿನಂದನೆಗಳು



### ಶಿವಪ್ರಸಾದ್ ಬಾರ್ಕೂರು

ಬಾರ್ಕೂರಿನ ಸತೀಶ್ ರಾವ್ ಹಾಗೂ ಅಪ್ಸರಾ ದಂಪತಿಗಳ ಪುತ್ರ ಶಿವಪ್ರಸಾದ್ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಚಾರ್ಟರ್ಡ್ ಅಕೌಂಟೆನ್ಸಿ ಅಂತಿಮ ಪರೀಕ್ಷೆ (ICAI CA 2023)ಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಉಡುಪಿಯ ಶಬ್ಬೀರ್ ಮತ್ತು ಗಣೇಶ್ ಚಾರ್ಟರ್ಡ್ ಅಕೌಂಟೆಂಟ್ ಅವರಲ್ಲಿ ತರಬೇತಿ ಪಡೆದಿದ್ದಾರೆ.



### ಸುಬ್ರಹ್ಮಣ್ಯ ಆರ್.ಎಂ.

ಪುತ್ತೂರು ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರ್, ರಾಮಕುಂಜ ನಿವಾಸಿ ಸುಬ್ರಹ್ಮಣ್ಯ ಆರ್.ಎಂ. ರವರು ಮಂಡಿಸಿದ ಮಹಾಪ್ರಬಂಧಕ್ಕೆ ಬೆಳಗಾವಿಯ ವಿ.ಟಿ.ಯು. ಯೂನಿವರ್ಸಿಟಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಸುಬ್ರಹ್ಮಣ್ಯ ಆರ್.ಎಂ. ಅವರು ಮೈಸೂರಿನ ಎಂ.ಐ.ಟಿ.ಯು. ಪ್ರಾಂಶುಪಾಲ ಡಾ. ನರೇಶ್‌ಕುಮಾರ್ ಬಿ.ಜಿ. ಅವರ ಮಾರ್ಗದರ್ಶನದಲ್ಲಿ ಮಂಡಿಸಿದ್ದ "Studies on behaviour of L-column" ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಲಭಿಸಿದೆ. ರಾಮಕುಂಜೇಶ್ವರ ವಿದ್ಯಾಸಂಸ್ಥೆಗಳ ಹಳೆ ವಿದ್ಯಾರ್ಥಿಯಾಗಿರುವ ಸುಬ್ರಹ್ಮಣ್ಯ ಆರ್.ಎಂ. ಅವರು ರಾಮಕುಂಜ ಗ್ರಾಮದ ಮುರಾರಿ ರಾವ್ ಹಾಗೂ ವೆಂಕಟಲಕ್ಷ್ಮೀ ದಂಪತಿ ಪುತ್ರ.



### ಶ್ರೀಮತಿ ಸ್ನೇಹ ಸುಬ್ರಹ್ಮಣ್ಯ ರಾವ್


ಶ್ರೀಮತಿ ಸ್ನೇಹ ಸುಬ್ರಹ್ಮಣ್ಯ ರಾವ್ ಇವರು ಮಂಗಳೂರಿನ ಯೆನೆಪೋಯ ವಿಶ್ವವಿದ್ಯಾಲಯದ Allied health and basic science ವಿಭಾಗದಲ್ಲಿ ಡಾ। ರೇಖಾ ಪಿ.ಡಿ. ಇವರ ಮಾರ್ಗದರ್ಶನದಲ್ಲಿ "ENHANCING THE SUSTAINED RELEASE OF GROWTH FACTORS FROM PLATELETS USING NATURAL SULPHATED POLYSACCHARIDE FOR TREATING CHRONIC WOUNDS" ಎಂಬ ವಿಷಯದಲ್ಲಿ ತಮ್ಮ ಪಿ.ಎಚ್.ಡಿ ಪ್ರಬಂಧವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುತ್ತಾರೆ. ತಮ್ಮ ಪದವಿಯನ್ನು ಮಂಗಳೂರಿನ ಅಲೋಶಿಯಸ್ ಕಾಲೇಜು, ಸ್ನಾತಕೋತ್ತರ ಪದವಿಯನ್ನು ಕೊಣಾಜೆಯ ಮಂಗಳ ಗಂಗೋತ್ರಿಯಲ್ಲಿ ಪೂರೈಸಿರುವ ಇವರು ಮಂಗಳೂರಿನಲ್ಲಿರುವ ಶ್ರೀ ಎಂ.ಕೆ. ಸುಬ್ರಹ್ಮಣ್ಯ ರಾವ್ ಮತ್ತು ಸುಭದ್ರಾ ಎಸ್. ರಾವ್ ಇವರ ಪುತ್ರಿಯಾಗಿದ್ದು, ಬೆಂಗಳೂರಿನ ಶ್ರೀ ಸುಬ್ರಹ್ಮಣ್ಯ ಎಚ್. ಹೆಬ್ಬಾರ್ ಇವರನ್ನು ವಿವಾಹವಾಗಿ ಪ್ರಸ್ತುತ ಅಮೇರಿಕಾದ ಟೆಕ್ಸಾಸ್ ನಲ್ಲಿ ವಾಸವಾಗಿದ್ದಾರೆ.



### ವೈಭವ್ ಪಿ.ವಿ.

ಕಿನ್ನಿಗೋಳಿ ಎಸ್‌ಕೋಡಿಯ ಶ್ರೀ ವಾಸುದೇವ ಕುಮಾರ ಪಿ.ಎ. ಮತ್ತು ಶ್ರೀಮತಿ ಜಯಲಕ್ಷ್ಮೀ ದಂಪತಿಯ ಪುತ್ರ ವೈಭವ್ ಪಿ.ವಿ. ಅವರು ಎಸ್‌ಎಸ್‌ಎಲ್‌ಸಿಯ (ಸಿ.ಬಿ.ಎಸ್.ಇ) ಪರೀಕ್ಷೆಯಲ್ಲಿ 96% ಅಂಕಗಳಿಸಿ ಉತ್ತೀರ್ಣರಾಗಿದ್ದಾರೆ.

## ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ಚಂಡಿಕಾಹೋಮ



ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಹರ್ಷ ಕುಮಾರ್ ಕೇದಿಗೆಯವರು ಅವರ ಕುಟುಂಬದವರೆಲ್ಲರ ಸಹಕಾರದಲ್ಲಿ ಮತ್ತು ಶ್ರೀ ಶೃಂಗೇರಿ ಜಗದ್ಗುರುಗಳ ಆದೇಶದಂತೆ, ದಿನಾಂಕ 28.06.2023ರಿಂದ ದಿನಾಂಕ 07.07.2023ರ ವರೆಗೆ, ಕುಟುಂಬದ ಸರ್ವ ಸದಸ್ಯರ ಶ್ರೇಯಸ್ಸನ್ನು ಸಂಕಲ್ಪಿಸಿ, ಕೆಳಗಿನ ಕೇದಿಗೆ ಮೂಲ ಮನೆಯಲ್ಲಿ, ಪ್ರತಿ ದಿನ ಸಂಜೆ ನಾಲ್ಕು ಗಂಟೆಗೆ ಆರಂಭಿಸಿ, ಸಪ್ತಶತಿ ಸಂಪುಟ ಪಾರಾಯಣ ಹಾಗೂ ಸುವಾಸಿನಿ ಪೂಜೆಯನ್ನು ಮತ್ತು ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ 09.07.2023 ಆದಿತ್ಯವಾರ ಸಂಜೆ ನವಚಂಡಿಕಾ ಪಾರಾಯಣ ಹಾಗೂ 10.07.2023ರಂದು ಚಂಡಿಕಾ ಹೋಮವನ್ನು ಭಕ್ತಿಪೂರ್ವಕವಾಗಿ ನೆರವೇರಿಸಿದರು.



**2023ರ ವಿಶ್ವ ಕುಂದಾಪುರ ದಿನದ ಕುರಿತು ವಿಠಲವಾಡಿ ಫ್ರೆಂಡ್ಸ್ ಕುಂದಾಪುರ ಇವರು ಏರ್ಪಡಿಸಿದ್ದ ಮಾತಿನ ಸ್ಪರ್ಧೆಯಲ್ಲಿ ಶಿಕ್ಷಕ ಎಂ.ಗಣೇಶ್ ರಾವ್ ಬಾರ್ಕೂರು ಇವರು ದ್ವಿತೀಯ ಬಹುಮಾನ (ಹಲಸಿನ ಎಲೆಯ ಕೊಟ್ಟೆ ತಯಾರಿಸುವುದು) ಪಡೆದಿರುತ್ತಾರೆ.**

## ಉದ್ಯಾವರ ಬ್ರಾಹ್ಮಣ ಪರಿಷತ್ತಿನ ಅಧ್ಯಕ್ಷರಾಗಿ ಕೊಕ್ರಾಡಿ ಸುರೇಶ ರಾವ್



ಉದ್ಯಾವರ ಬ್ರಾಹ್ಮಣ ಪರಿಷತ್‌ನ ಅಧ್ಯಕ್ಷರಾಗಿ ಕೆ. ಸುರೇಶ ರಾವ್ ಕುತ್ಪಾಡಿ ಆಯ್ಕೆ ಇತ್ತೀಚೆಗೆ ನಡೆದ ಉದ್ಯಾವರ ಬ್ರಾಹ್ಮಣ ಪರಿಷತ್, ಉದ್ಯಾವರ ವಲಯದ ಮಹಾಸಭೆಯಲ್ಲಿ ಕೊಕ್ರಾಡಿ ಸುರೇಶ್ ರಾವ್ ಕುತ್ಪಾಡಿಯವರು ಮುಂದಿನ 2 ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶ್ರೀ ಸುರೇಶ್ ರಾವ್ ರವರು ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಮಾಜಿ ಕಾರ್ಯದರ್ಶಿಗಳಾಗಿದ್ದು, ಪ್ರಸ್ತುತ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಗೂ ಉಡುಪಿ ಕನ್ನರಪಾಡಿ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

## ಉಡುಪಿ ನೃತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಪ್ರೊ. ರಾಮಮೂರ್ತಿ ರಾವ್



ಡಿಸೆಂಬರ್ ತಿಂಗಳ 24 ಮತ್ತು 25 ರಂದು ಉಡುಪಿಯಲ್ಲಿ ಜರಗಲಿರುವ ಕರಾವಳಿಯ ನೃತ್ಯ ಕಲಾವಿದರ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಮೈಸೂರಿನ ನಾಟ್ಯಾಚಾರ್ಯ ಪ್ರೊ. ರಾಮಮೂರ್ತಿ ರಾವ್ ಅವರನ್ನು ಇತ್ತೀಚೆಗೆ ನಡೆದ ಸಮಿತಿಯ ಸಭೆಯಲ್ಲಿ ಸರ್ವಾನುಮತದಿಂದ ಆರಿಸಲಾಯಿತು.

ಮೂಲತಃ ಉಡುಪಿಯವರಾದ ರಾಮಮೂರ್ತಿ ರಾಯರು ನೃತ್ಯ ಕ್ಷೇತ್ರದ ಅಸಾಧಾರಣ ಪ್ರತಿಭೆ, ನೃತ್ಯ ಕಲಾವಿದನಾಗಿ, ನೃತ್ಯ ಗುರುವಾಗಿ, ನಿರ್ದೇಶಕನಾಗಿ, ಕಲಾ ವಿಮರ್ಶಕನಾಗಿ, ಲೇಖಕನಾಗಿ, ಸಂಘಟಕನಾಗಿ, ಪರೀಕ್ಷಾ ಮಂಡಳಿ, ಪಠ್ಯಪುಸ್ತಕ ರಚನಾ ಸಮಿತಿ, ಸಂಗೀತ ನೃತ್ಯ ಅಕಾಡೆಮಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದ ಅನುಭವಿ ಹಾಗೂ ಮೇಧಾವಿ. ಕಲೆಗೆ ಸಂಬಂಧಿಸಿದ ಗ್ರಂಥಗಳ ಸಂಪಾದಕತ್ವ ಅಲ್ಲದೆ ನೃತ್ಯ ರಂಗಕ್ಕೆ ಉಪಯುಕ್ತವಾದ ಗ್ರಂಥಗಳ ಲೇಖಕರೂ ಹೌದು. ವಾಣಿಜ್ಯ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ವಿದ್ವಾಂಸರು. ಪ್ರಸ್ತುತ ನೃತ್ಯರಂಗ, ಸಾಹಿತ್ಯ ಕ್ಷೇತ್ರ, ಸಮಾಜಮುಖಿ ಸೇವೆಗಳಲ್ಲಿ ಸಕ್ರಿಯವಾಗಿ ತೊಡಗಿ ಕೊಂಡಿರುವ ಶ್ರೀಯುತರು ತನ್ನ ಬಹುಮುಖ ಸೇವೆಗಾಗಿ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳ ಸರದಾರನಾಗಿ ನೃತ್ಯ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದ ಕರಾವಳಿಯ ಕಲಾರತ್ನವಾಗಿದ್ದಾರೆ.

## ಶ್ರೀ ಶಂಕರ ಪ್ರತಿಷ್ಠಾನ (ರಿ.) ಕಾರ್ಕಳ : ವಾರ್ಷಿಕೋತ್ಸವ



ಶ್ರೀ ಶಂಕರ ಪ್ರತಿಷ್ಠಾನ (ರಿ.) ಕಾರ್ಕಳ (ಸ್ಥಾನಿಕ ಬ್ರಾಹ್ಮಣ ಸಂಘ) ಇದರ 39ನೆಯ ವಾರ್ಷಿಕೋತ್ಸವ ದಿನಾಂಕ 30.07.2023 ರಂದು ಶ್ರೀ ರಾಧಾಕೃಷ್ಣ ಸಭಾ ಭವನದಲ್ಲಿ ಜರುಗಿತು, ಮಹಿಳಾ ವಿಭಾಗದ ಸದಸ್ಯರಿಂದ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ದೀಪ ಬೆಳಗುವುದರ ಮೂಲಕ ಉದ್ಘಾಟನೆಗೊಂಡಿತು, ವೇದಿಕೆಯಲ್ಲಿ ಅಧ್ಯಕ್ಷರಾದ ಶ್ರೀ ಕೇಶವ ರಾವ್, ಗೌರವ ಅಧ್ಯಕ್ಷರಾದ ಶ್ರೀ ಮುರಳೀಧರ ಶರ್ಮಾ, ಉಪಾಧ್ಯಕ್ಷರಾದ ರಾಜಶೇಖರ್ ರಾವ್, ಕಾರ್ಯದರ್ಶಿ ಶ್ರೀ ಸತೀಶ್ ರಾವ್ ಕರ್ವಾಲು, ಕೋಶಾಧಿಕಾರಿ ಶ್ರೀ ಕೋದಂಡರಾಮ, ಮಹಿಳಾ ಅಧ್ಯಕ್ಷೆ ಶ್ರೀಮತಿ ವಿದ್ಯಾವತಿ, ಮಹಿಳಾ ಕಾರ್ಯದರ್ಶಿ ಶ್ರೀಮತಿ ಮಲ್ಲಿಕಾ ಎಸ್. ಹೆಬ್ಬಾರ್, ಮುಖ್ಯ ಅತಿಥಿಗಳಾಗಿ ಶ್ರೀ ನಕ್ರೆ ಬಾಲಕೃಷ್ಣ ರಾವ್, ಶ್ರೀ ಸತೀಶ್ ಕುಮಾರ್ ಕೆಮ್ಮಣ್ಣು, ವಿದ್ಯಾ ನಿಧಿ ಮತ್ತು ವಾರ್ಷಿಕೋತ್ಸವ ನಿಧಿ ಸಂಚಾಲಕರಾದ ಶ್ರೀ ಮನೋಹರ್ ರಾವ್, ಶ್ರೀ ವಿಜಯ ಕುಮಾರ್ ಪರಪ್ಪು, ಶ್ರೀ ಭವಾನಿ ಶಂಕರ ರಾವ್, ಯುವ ವೇದಿಕೆಯ ಅಧ್ಯಕ್ಷ ಶ್ರೀ ವಿಘ್ನೇಶ್ ಕುಮಾರ್, ಕಾರ್ಯದರ್ಶಿ ಶ್ರೀ ಶಶಾಂಕ್ ರಾವ್ ಉಪಸ್ಥಿತರಿದ್ದರು.

ಶ್ರೀಮತಿ ವಿದ್ಯಾವತಿ ಸ್ವಾಗತಿಸಿ, ಶ್ರೀಮತಿ ಮಲ್ಲಿಕಾ ಹೆಬ್ಬಾರ್ ವಂದಿಸಿದರು, ಶ್ರೀ ಸತೀಶ್ ರಾವ್ ಕರ್ವಾಲು ವರದಿ ವಾಚಿಸಿದರು. ಶ್ರೀ ಕೋದಂಡರಾಮ ರಾವ್ ಲೆಕ್ಕಪತ್ರ ಮಂಡಿಸಲಾಗಿ ಅನುಮೋದಿಸಲಾಯಿತು.

ಅಧ್ಯಕ್ಷರಾದ ಶ್ರೀ ಕೇಶವರಾವ್ ಅಧ್ಯಕ್ಷೀಯ ಭಾಷಣದಲ್ಲಿ ಸಂಘದ ಸಂಘಟಿತ ಶಕ್ತಿ ಮತ್ತು ಮುಂದೆ ಆಗಬೇಕಾದ ಕಾರ್ಯದ ಕುರಿತು ವಿವರಿಸಿದರು, ಮುಖ್ಯವಾಗಿ ಸಂಘಕ್ಕೆ ನಿವೇಶನ ಮತ್ತು ಕಟ್ಟಡದ ಅಗತ್ಯದ ಬಗ್ಗೆ ವಿವರಿಸಿದರು, ಹಲವು ಸಾಂಸ್ಕೃತಿಕ ಕಾರ್ಯಕ್ರಮ ನಡೆದವು, ಕಾರ್ಯಕ್ರಮವನ್ನು ಶ್ರೀಮತಿ ಸೌಮ್ಯ ಭವಾನಿಶಂಕರ ನಿರ್ವಹಿಸಿದರು, ಸಂಗೊಳ್ಳಿ ರಾಯಣ್ಣ ಎಂಬ ಕಿರು ನಾಟಕವನ್ನು ಸಂಘದ ಸದಸ್ಯರು ನಡೆಸಿಕೊಟ್ಟರು ಮತ್ತು ಶ್ರೀಮತಿ ಸಾವಿತ್ರಿ ಮನೋಹರ್ ನಿರ್ದೇಶಿಸಿದರು. ಹಿರಿಯ ದಂಪತಿಗಳನ್ನು ಸನ್ಮಾನಿಸಿ, ಮತ್ತು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ. ಯಲ್ಲಿ ಪ್ರಥಮ, ದ್ವಿತೀಯ ಬಂದವರನ್ನು ಸನ್ಮಾನಿಸಲಾಯಿತು. ಉಳಿದ ಮಕ್ಕಳಿಗೆ ನಗದು ಪುರಸ್ಕಾರ ನೀಡಲಾಯಿತು, ಸಂಘದ ಸದಸ್ಯರೆಲ್ಲರಿಗೂ ಆಟೋಟ ಸ್ಪರ್ಧೆ ಏರ್ಪಡಿಸಿದ್ದು ವಿಜೇತರಾದವರಿಗೆ ಬಹುಮಾನವನ್ನು ನೀಡಲಾಯಿತು. ಸಹಭೋಜನದ ಪ್ರಾಯೋಜಕರಾದ ಶ್ರೀಮತಿ ಮತ್ತು ಶ್ರೀ ರಮೇಶ್ ರಾವ್ ಸಿ. ಕಾಬೆಟ್ಟು ಅವರುಗಳನ್ನು ಹಾಗೂ ಪ್ರಾಯೋಜಕರನ್ನು ಸನ್ಮಾನಿಸಲಾಯಿತು.

ಶ್ರೀಮತಿ ಸಾವಿತ್ರಿ ಮನೋಹರ್ ಮತ್ತು ಶ್ರೀ ಅನಿಲ್ ಕುಮಾರ್ ಕೆಮ್ಮಣ್ಣು ಕಾರ್ಯಕ್ರಮ ನಿರ್ವಹಿಸಿದರು. ಹಾಗೂ ಹೊಸ ಸಮಿತಿ ಪದಾಧಿಕಾರಿಗಳ ಆಯ್ಕೆಯನ್ನು ಸಮಾಜದ ಹಿರಿಯರಾದ ಶ್ರೀ ರಮೇಶ್ ರಾವ್ ಸಿ. ಕಾಬೆಟ್ಟು ಇವರು ನಡೆಸಿಕೊಟ್ಟರು.

## ಬೆಳವಾಡಿಯ ನೆಲದಲ್ಲೊಂದು ಸುಂದರ ಕಲಾಕೃತಿ

■...2ನೇ ಪುಟದಿಂದ



ಮತ್ತು ತಳಭಾಗ ಹಾಗೂ ಹೊರಭಾಗದ ಗೋಡೆ ಸಹಿತ ಮೇಲ್ಭಾಗದ ಗೋಪುರಗಳಲ್ಲಿ ಒಂಭತ್ತು ಆಕರ್ಷಕ ಭುವನೇಶ್ವರಿಯ ವಿಗ್ರಹಗಳು, ವಿಷ್ಣುವಿನ ಅವತಾರಗಳು, ನಾರಾಯಣನ ವಿವಿಧ ರೂಪಗಳು, ರಾಮಾಯಣ ಮತ್ತು ಮಹಾಭಾರತದ ಕಥಾ ಚಿತ್ರಗಳು, ದೇವತೆಗಳು, ಯಕ್ಷರು, ವಿಭಿನ್ನ ಭಂಗಿಯ ಮಾವುತ ಸಹಿತ ಆನೆಗಳ ಸಾಲು, ಹಂಸ, ಗರುಡ, ಮನ್ಮಥ, ನವಿಲುಗಳೊಂದಿಗೆ ಸೂಕ್ಷ್ಮ ಕುಸುರಿ ಕೆತ್ತನೆಯ ಹೂ–ಬಳ್ಳಿಗಳ ಅಲಂಕಾರಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಆದರೆ ಕಾಲನ ಹೊಡೆತಕ್ಕೆ ಸಿಕ್ಕಿ ಜರ್ಜರಿತವಾಗುತ್ತಿದೆ. ವಿಶೇಷವಾಗಿ ಪ್ರತೀ ಮಾರ್ಚ್ ಇಪ್ಪತ್ತಮೂರರಂದು ಸೂರ್ಯೋದಯದ ಕಿರಣಗಳು ನೇರವಾಗಿ ಏಳು ದ್ವಾರಗಳನ್ನು ದಾಟಿ ವೀರನಾರಾಯಣ ಸ್ವಾಮಿಯ ಮೇಲೆ ಬೀಳುವ ವಿಸ್ಮಯವನ್ನು ನೋಡಲು ಬಹಳಷ್ಟು ಭಕ್ತರು ಸೇರುತ್ತಾರೆ. ನಿತ್ಯವೂ ಹಾಗೂ ವಿಶೇಷ ದಿನಗಳಲ್ಲಿ ಪೂಜೆ ಉತ್ಸವಾದಿಗಳು ನಡೆಯುತ್ತಿದೆ. ಶೃಂಗೇರಿಯ ಶ್ರೀ ಶಾರದಾ ಪೀಠಂ, ಇಲ್ಲಿನ ಪೂಜಾ ಕಾರ್ಯಕ್ರಮ ಹಾಗೂ ಉಸ್ತುವಾರಿಯನ್ನು ನಿರ್ವಹಿಸುತ್ತಿದೆ. ಸುಮಾರು ಇನ್ನೂರು ಅಡಿಗಿಂತಲೂ ಹೆಚ್ಚು ಉದ್ದವಿರುವ ಈ ದೇವಾಲಯದ ಸುತ್ತಲೂ ಹಚ್ಚಹಸಿರಿನೊಂದಿಗೆ ಕೆಂಪು ಎಲೆಗಳ ಗಿಡಗಳನ್ನೇ ಸುತ್ತಲೂ ದಂಡೆಯಂತೆ ರಚಿಸಿ ನಡುನಡುವೆ ಹೂ–ಗಿಡಗಳ ಗುಂಪನ್ನು ಬೆಳೆಸಿರುವುದು ದೇವಾಲಯದ ಸಮುಚ್ಛಯದ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ. ಹೊರ ಆವರಣದಲ್ಲಿ ದಂಬೆ ಹೆಂಚಿನ ಪುಟ್ಟ ಪುಟ್ಟ ಮನೆಗಳು, ಅಂಗಳದಲ್ಲಿನ ಎತ್ತಿನ ಬಂಡಿಗಳು ಇಲ್ಲಿನ ಜನರ ಜೀವನ ಶೈಲಿಯನ್ನು ತಿಳಿಸುತದೆ. ಈ ಸುಂದರ ಹೊಯ್ಸಳ ವಾಸ್ತುಶಿಲ್ಪದ ದೇವಾಲಯವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ರಾಷ್ಟ್ರೀಯ ಮಹತ್ವದ ಸ್ಮಾರಕವೆಂದು ಘೋಷಿಸಿದೆ. ಐತಿಹ್ಯದಂತೆ ಭೀಮನು ಬಕಾಸುರನನ್ನು ಕೊಂದ ಸ್ಥಳ (ಏಕಚಕ್ರ ನಗರ) ವಾಗಿದ್ದುದರಿಂದ ಈ ಗ್ರಾಮದಲ್ಲಿ ಬಂಡಿ ಹಬ್ಬವೂ ನಡೆಯುತ್ತದೆ. ಚಿಕ್ಕಮಗಳೂರಿನಿಂದ ಇಪ್ಪತ್ತೊಂಬತ್ತು ಕಿ.ಮೀ. ಮತ್ತು ಹಳೇಬೀಡಿನಿಂದ ಹನ್ನೆರಡು ಕಿ.ಮೀ. ದೂರದಲ್ಲಿದೆ ಈ ಬೆಳವಾಡಿ ದೇವಾಲಯ.

**ಚಿತ್ರ, ಲೇಖನ: ಕೆ. ದಿನಮಣಿ ಶಾಸ್ತ್ರೀ, ಬ್ರಹ್ಮಾವರ**

### ಕಡಬ ಸ್ಥಾನಿಕ ಸಂಘ


## ಪುನಶ್ಚೇತನ ಹಾಗೂ ಮಹಿಳಾ ವೇದಿಕೆ ಸಮಿತಿ ರಚನೆ ಕಾರ್ಯಕ್ರಮ



ಕಡಬ ಸ್ಥಾನಿಕ ಸಂಘ ಇದರ ಪುನಶ್ಚೇತನ ಹಾಗೂ ಮಹಿಳಾ ವೇದಿಕೆ ಸಮಿತಿ ರಚನೆ ಕಾರ್ಯಕ್ರಮವು ದಿನಾಂಕ 29.07.2023 ರಂದು ಕಡಬದ ಶ್ರೀ ಮಹಾಗಣಪತಿ ಶ್ರೀಕಂಠಸ್ವಾಮಿ ದೇವಳದ ಸಭಾಂಗಣದಲ್ಲಿ ಜರಗಿತು. ಕುಮಾರಿ ಶ್ವೇತಾ ಅವರ ಪ್ರಾರ್ಥನೆಯೊಂದಿಗೆ, ಶ್ರೀ ಸೀತಾರಾಮ ರಾವ್ ಪುತ್ರಬೈಲು ಇವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸ್ಥಾನಿಕ ಸಂಘ ಕಡಬ ಸಮಿತಿಯ ಗೌರವಾಧ್ಯಕ್ಷರಾಗಿ ಶ್ರೀ ಸೀತಾರಾಮ ರಾವ್ ಪುತ್ರಬೈಲು, 2023–2024ನೇ ಸಾಲಿನ ಅಧ್ಯಕ್ಷರಾಗಿ ಶ್ರೀ ಪದ್ಮನಾಭಯ್ಯ ಉಬರಳೆ, ಉಪಾಧ್ಯಕ್ಷರಾಗಿ ಶ್ರೀ ಜನಾರ್ದನ ರಾವ್ ಆಕಿರೆಕಾಡು, ಕಾರ್ಯದರ್ಶಿಯಾಗಿ ಶ್ರೀ ಪ್ರಸನ್ನ ಕುಮಾರ್ ಪುತ್ರಬೈಲು, ಜೊತೆ ಕಾರ್ಯದರ್ಶಿಯಾಗಿ ಶ್ರೀ ರಾಜೇಶ್ ರಾವ್ ತಲೇಕಿ, ಕೋಶಾಧಿಕಾರಿಯಾಗಿ ಶ್ರೀ ರಾಜೇಶ್ ಕೋಲ್ಪೆ, ಗೌರವ ಸಲಹೆಗಾರರಾಗಿ ಶ್ರೀ ಹರಿಕಿರಣ ಕೊಯಿಲ ಮತ್ತು ಕಾನೂನು ಸಲಹೆಗಾರರಾಗಿ ಶ್ರೀ ರವಿಕಿರಣ್ ಕೊಯಿಲ ಇವರು ಆಯ್ಕೆಯಾಗಿರುತ್ತಾರೆ.

ಮಹತೀ ಸ್ಥಾನಿಕ ಮಹಿಳಾ ವೇದಿಕೆ ಸಮಿತಿಯ ಗೌರವಾಧ್ಯಕ್ಷರಾಗಿ ಶ್ರೀಮತಿ ಶಾಂತಿ ಗೋಪಾಲ್ ರಾವ್ ಬಿಳಿನೆಲೆ, 2023–2024 ಸಾಲಿನ ಅಧ್ಯಕ್ಷರಾಗಿ ಶ್ರೀಮತಿ ಹರ್ಷಿಣಿ ಶಿವಕುಮಾರ್ ಪಟ್ನ, ಉಪಾಧ್ಯಕ್ಷರಾಗಿ ಶ್ರೀಮತಿ ವಾಣಿ ಜಡೆಮನೆ, ಕಾರ್ಯದರ್ಶಿಯಾಗಿ ಶ್ರೀಮತಿ ಪ್ರಮೀಳ ಸನತ್ ಕುಮಾರ್ ಬಿಳಿನೆಲೆ, ಕೋಶಾಧಿಕಾರಿಯಾಗಿ ಶ್ರೀಮತಿ ಪದ್ಮಿನಿ ರವಿಕಿರಣ್‌ರವರು ಆಯ್ಕೆಯಾಗಿರುತ್ತಾರೆ.

ಕಡಬ, ಸುಬ್ರಹ್ಮಣ್ಯ, ಉಪ್ಪಿನಂಗಡಿ, ರಾಮಕುಂಜ ಹೀಗೆ ಸುತ್ತ ಮುತ್ತಲಿನ ಸುಮಾರು 40 ಸ್ಥಾನಿಕ ಬಾಂಧವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**Relax with the whole family at this peaceful place to stay with all major attractions at a short distance. Enjoy the sea waves at Malpe beach within 5KM drive. Seak blessing at the famous Srikrishna Temple and Anantheshwara Temple which is just 2KM. Perfect place for hosting wedding guests with major wedding venues and convention halls near by.**

**SUMIRASA - Full Villa in Udupi for Stay**

**WHAT THIS PLACE OFFERS**

- GARDEN VIEW
- BATHROOM
  Cleaning products, Bidet, Hot water
- BEDROOM AND LAUNDRY
  Free washing machine
- ESSENTIALS
  Towels, bed sheets, soap, Hangers
- BED LINEN
  Cotton linen
- CLOTHES DRYING RACK
- CLOTHES STORAGE: Wardrobe and drawers
- ENTERTAINMENT
  TV and Books and reading material
- HEATING AND COOLING
  AC – split-type ductless system, Ceiling fan
- INTERNET AND OFFICE
  Wifi
- KITCHEN AND DINING
  Kitchen Space where guests can cook
- REFRIGERATOR
- COOKING BASICS
- DISHES AND SILVERWARE






**For Booking Contact : +91 98220 28537**
**You can also visit https://www.airbnb.co.in/rooms**



**With Best Compliments From :**

**BUILDING DREAMS, ENHANCING LIVES.**


NAKSHATRA
GANDHINAGAR


SOLITAIRE
HATHILL,


HABITAT ONE 54
An Urban Lifestyle
DEREBAIL


ANANTESSH
CAR STREET,

Land Trades®
BUILDERS & DEVELOPERS
BUILDING TRUST, DELIVERING VALUE
MANGALURU'S LEADING REAL ESTATE COMPANY
RESIDENTIAL | COMMERCIAL | PLOTS

For More Details : 8882 777 444 | 0824 2425424, 2423866 | www.landtrades.in

Follow us on :


SHREE SHARADA – Printed and Published by P. Prabhakara Bhandy on behalf of Shree Stanika Brahmana Sangha. Printed at Shrinidhi Graphic Tech, D.No. 8-7A1-12, Ground Floor, Shambhavi Crystal Biz Hub, Near D.C Office, Saralabettu Ward, Herga Village, Dist : UDUPI - 576104, Karnataka. Published at : Shri Stanika Brahmana Sangha, Shri Sharada Mantapa, Sharada Nagara, Kunjibettu, Udupi - 576 102. Editor : U. Aravinda Kumar